
ಹಿತ್ತಲ ಗಿಡ

ಚಾತುರ್ಮಾಸಿಕ
ಪೈರು 10, ಕೊಯಿಲು 2 – 3, ಮೇ – ಡಿಸೆಂಬರ್, 2004

ರೈತ ವಿಜ್ಞಾನಿ, ವಿದ್ಯಾರ್ಥಿ,
ಸ್ವಯಂ ಸೇವಾ ಸಂಸ್ಥೆ
ಮತ್ತು ವ್ಯಕ್ತಿಗಳ
ಸಾಮೂಹಿಕ ಪ್ರಯತ್ನ

'ಹಿತ್ತಲಗಿಡ'ಕ್ಕೆ ಹತ್ತು ವರ್ಷ - 1995-2005





ದಲಿತ ಮಹಿಳೆಯ ಕೈಗೆ ಎಲೆಕ್ಟ್ರಾನಿಕ್ ಮಾಧ್ಯಮ – *DDS*ನ ಸಾಧನೆ

1996



1996



1997



ಈ ಸಂಚಿಕೆಯಲ್ಲಿ

ಜನರಿಗೆ ಪ್ರತಿಫಲ ನೀಡುವಂತಹ ತಂತ್ರಜ್ಞಾನ, ಸಂಸ್ಥೆ ಮತ್ತು ಮೌಲ್ಯಗಳನ್ನು ಹುಟ್ಟು ಹಾಕುವ ಪ್ರಯತ್ನ

ದೇಶೀಯ ಜ್ಞಾನ, ತಂತ್ರಜ್ಞಾನ ಮತ್ತು ಸಂಸ್ಥೆಗಳು, ತಳಮಟ್ಟದ ಅನುಶೋಧನೆ, ಸ್ಥಳೀಯ ಸಂಪನ್ಮೂಲ, ಜೀವ ವಿವಿಧತೆ ಮತ್ತು ರೈತ ಶಕ್ತಿ ಇವುಗಳ ಮೂಲಕ ಸುಸ್ಥಿರ ಕೃಷಿ ಅಭಿವೃದ್ಧಿ ಮೇಲಿನ ಚರ್ಚೆಗೆ ಮೀಸಲಾದ ಪತ್ರಿಕೆ

ಹನಿ ಬೀ ಬಳಗ

Honey Bee (*English*)
Prof. Anil K.Gupta, Indian Institute of Management,
Vastrapur, Ahmedabad - 380 015, Ph: 079-26307241
email: anilg@nifindia.org, honeybee@sristi.org

Ama Akha Pakha (*Oriya*)
Dr. Balaram Sahu, 3R BP 5/2, BP Colony, Unit-8,
Bhubaneswar - 751 012, Orissa, balaram_sahu@hotmail.com

Loksarvani (*Gujarati*)
Dilip Koradiya, SRISTI P.O.Box 15050
Ahmedabad, Gujarat - 380015, loksarvani@sristi.org

Makhir (*Pahari*)
Dr.A.Chandan, ERA, Khundian, District Kangra,
Himachal Pradesh - 176030, makhir@epatra.com

Num Vali Velanmai (*Tamil*)
P. Vivekanandan, 45, TPM Nagar, Virattipathu
Tamil Nadu - 625 010, numvali@vsnl.com

Sujh-Bujh Aas Paas Ki (*Hindi*)
Shalini Sharma, H-12 ODS Flats Lajpat Nagar 4
New Delhi - 110024, sujhbuj@sristi.org

&

Hittalagida *(Kannada)*

ತಿದ್ದುಪಡಿ

ಹಿಂದಿನ ಸಂಚಿಕೆಯಲ್ಲಿ ಪ್ರಕಟಿತವಾದ "ಕರ್ನಾಟಕದ ಮಲೆನಾಡಿನಲ್ಲಿ 12ನೇ ಶೋಧಯಾತ್ರೆ" ಲೇಖನದಲ್ಲಿ ಸನ್ಮಾನಿತರಾದವರ ಪಟ್ಟಿಯಲ್ಲಿ ಕೆಳ ಕಾಣಿಸಿದ ಹೆಸರುಗಳು ಬಿಟ್ಟು ಹೋಗಿವೆ.

1) ಶ್ರೀ ಎ ಮ್.ಆರ್. ಬಾಲಕೃಷ್ಣ, ಕೊಪ್ಪ (ಹಳದಿ ಎಲೆ ರೋಗ ಸಂಶೋಧನೆ)
2) ಶ್ರೀ ದಿನೇಶ್, ಜಮ್ಮಟಿಗೆ, ಪ್ರಕೃತಿ (ಪುರಾತನ) ಛಾಯಾಚಿತ್ರ
3) ಶ್ರೀ ಕೃಷ್ಣದೇವರ ಭಟ್, ಜಮ್ಮಟಿಗೆ, (ಇತಿಹಾಸ)
4) ಶ್ರೀ ಅರುಣಾಚಲ ಹೆಬ್ಬಾರ್, ಹರಿಹರಪುರ (ಚಿತ್ರದ ಕೊಳಲು, ಪ್ರಕೃತಿ ಪ್ರವಾಸ)

ಸಂಪಾದಕರು

ಹಿತ್ತಲ ಗಿಡದ ಪೋಷಣೆಗೆ ಸಹಾಯ:

PRITVI (People Rewarding Initiatives in Technology Values & Institutions), Bangalore, **SRISTI** (Society for Research and Initiatives for Sustainable Technologies and Institutions), Ahmedabad & **NIF** (National Innovation Foundation, India), New Delhi

ಸಂಪಾದಕೀಯ

'ಹಿತ್ತಲಗಿಡ'ಕ್ಕೆ ಹತ್ತು ವರ್ಷ

1994ರ ಚಳಿಗಾಲದ ತಿಂಗಳೊಂದರಲ್ಲಿ, ಅಹಮದಾಬಾದಿನಲ್ಲಿ ಜರುಗಿದ ಒಂದು ಅಂತರರಾಷ್ಟ್ರೀಯ ಗೋಷ್ಠಿಯಲ್ಲಿ ಪಾಲ್ಗೊಂಡ ಸಂದರ್ಭದಲ್ಲಿ ಪ್ರೊ. ಗುಪ್ತಾರ ಅನಿರೀಕ್ಷಿತ ಭೇಟಿಯಾಯ್ತು. ಇದಕ್ಕೆ ಗೆಳೆಯ ಡಾ. ಚಂದ್ರಕಾಂತ್‌ರ ಮಧ್ಯಸ್ತಿಕೆ. ನಂತರ ಬೆಂಗಳೂರಿನಲ್ಲಿ ಜರುಗಿದ ಒಂದು ಚಿಕ್ಕ ಸಭೆಯಲ್ಲಿ 'ಹಿತ್ತಲಗಿಡ'ದ ಹುಟ್ಟು, ಗೆಳೆಯರಾದ ಇಕ್ರಾ ಬಾಬು, ಆನಂದ್, ಅರುಣ ಕುಮಾರ್, ತೇಜಸ್ವಿನಿಯರ ಸಹಾಯದಿಂದ ಮೊದಲ ಸಂಚಿಕೆ ತಯಾರಿ. ಕೆಲ ತಿಂಗಳಲ್ಲೇ, ಒಂದು ವಿಶೇಷ ಸಮಾರಂಭದಲ್ಲಿ ಸಂಚಿಕೆ ಬಿಡುಗಡೆ, ಡಾ. ಜಿ.ಕೆ. ವೀರೇಶ್, ಪ್ರೊ. ಗುಪ್ತ ಮತ್ತು ಡಾ. ಸುದರ್ಶನರ ಸಮ್ಮುಖದಲ್ಲಿ.

ಅಲ್ಲಿಂದ ಇಲ್ಲಿಯವರೆಗೆ ಸುಮಾರು 27 ಸಂಚಿಕೆಗಳು ಹೊರ ಬಂದಿವೆ. ಸಾವಿರಾರು ನಾಟಿ ಪದ್ಧತಿಗಳು, ನೂರಾರು ತಳಮಟ್ಟದ ಅನುಶೋಧಕರ ಪರಿಚಯ ಮಾಡಿಕೊಡಲಾಗಿದೆ. 25ಕ್ಕೂ ಮಿಕ್ಕ ಕೃಷಿ ವಿದ್ಯಾರ್ಥಿಗಳ ಶ್ರಮ ಮತ್ತು ಸಹಕಾರ ದೊರೆತಿದೆ. ಪ್ರೊ. ಬಿ.ಆರ್. ಹೆಗ್ಡೆಯಂತಹ ಕೃಷಿ ವಿಜ್ಞಾನಿಗಳ ನಿರಂತರ ಬೆಂಬಲ ಹಾರೈಕೆಗಳು ಪತ್ರಿಕೆ ಮೇಲಿರುತ್ತದೆ. ರೈತರು, ಸಂಘ ಸಂಸ್ಥೆಗಳು, ವಿದ್ಯಾರ್ಥಿಗಳು, ವಿಜ್ಞಾನಿಗಳು, ಮಾಧ್ಯಮ ಎಲ್ಲರಿಂದ ಈ ಹೊಸ ಪ್ರಯೋಗಕ್ಕೆ ಮುಕ್ತ ಹೃದಯದ ಸ್ವಾಗತ ದೊರಕಿರುತ್ತದೆ. ಮಧ್ಯೆ ಮಧ್ಯೆ ಶ್ರೀ ವಿ.ಎಸ್. ಕೃಷ್ಣ ಅಯ್ಯರ್, ಮಾಜಿ ಕೃಷಿ ಮಂತ್ರಿ ಶ್ರೀ ಜಯಚಂದ್ರರಿಂದ ಹಿಡಿದು ಡಾ. ಅನಂತಮೂರ್ತಿಯವರಂತಹ ಗಣ್ಯರಿಂದ ಬೆನ್ನು ತಟ್ಟುವಂತಾಗಿದ್ದು ವಿಶೇಷ ತೃಪ್ತಿ ತಂದಿದೆ.

ಪ್ರೊ. ಗುಪ್ತಾ ಮತ್ತವರ SRISTI *ಹಾಗೂ* NIF *ತಂಡಗಳಿಂದ ನಿರಂತರ ಬೆಂಬಲ ಹಿತ್ತಲಗಿಡಕ್ಕೆ ದೊರೆತಿರುವುದರಲ್ಲಿ ಸಂಶಯವಿರದು. ನರಸಿಂಹ ಭಂಡಾರಿ, ಉದ್ಗಾವೆ, ಚಾಂದ್ ಹುಸೇನ್, ಸೀತಾಲಕ್ಷ್ಮಿಯಂತಹ ಸುಮಾರು 50 ತಳಮಟ್ಟದ ಅನುಶೋಧಕರನ್ನು ವಿವಿಧ ಸಮಾರಂಭಗಳ ಮೂಲಕ ಪುರಸ್ಕರಿಸಿ ಈ ಮೂಲಕ ಭರವಸೆ ಪ್ರಶಂಸೆಗಳ ಮಾತಾಡುವಂತಾಗಿದ್ದು ಅಷ್ಟೇ ತೃಪ್ತಿ ತಂದಿರುತ್ತದೆ. ಕಳೆದ ವರ್ಷಾಂತ್ಯದಲ್ಲಿ ಮಲೆನಾಡಿನಲ್ಲಿ ಜರುಗಿದ ಶೋಧಯಾತ್ರೆ ಹಿತ್ತಲಗಿಡ ತಳಮಟ್ಟದಲ್ಲಿ ಗಟ್ಟಿಯಾಗುವ ಸಾಧ್ಯತೆಯನ್ನು ಎತ್ತಿ ತೋರಿಸಿರುತ್ತದೆ.*

ಹೀಗೆ, 'ಹಿತ್ತಲಗಿಡ'ವೂ ಮದ್ದಾಗಬಹುದೆನ್ನುವ ಈ ಪುಟ್ಟ ಪ್ರಯತ್ನಕ್ಕೆ ಈಗ ಹತ್ತು ವರ್ಷಗಳು. ಇದಕ್ಕೆ "ಆರಕ್ಕೆ ಹೆಚ್ಚಾಗಿಲ್ಲ ಮೂರಕ್ಕಿಂತ ಕಡಿಮೆಯೂ ಆಗಿಲ್ಲ" ಎಂಬ ಟೀಕೆ ಕೂಡ ಇದೆ. ಕಳೆದ ಸಂಚಿಕೆಯಲ್ಲಿ ಪ್ರಕಟಿಸಿದ ಹಸುಗಳಲ್ಲಿ ಉಣ್ಣೆ ನಿಯಂತ್ರಣದ ಒಂದು ಸರಳ ಪದ್ಧತಿಯ ಉಪಯೋಗ ಪಡೆದ ತಿಮ್ಮಲಾಪುರದ ಅಪ್ಪಣ್ಣ ಬರೆದ ಒಂದು ಪ್ರಶಂಸೆಯ ಪತ್ರವನ್ನು ಈ ಸಂಚಿಕೆಯಲ್ಲಿ ಪ್ರಕಟಿಸುತ್ತಿರುವೆವು ಹಾಗೆ, ನಮ್ಮ ಭಂಡಾರಿ ಅಡಿಕೆ ಸುಲಿಯುವ ಯಂತ್ರದ ಬಗ್ಗೆ ಸಿಂಗಪುರದಿಂದ ಪತ್ರ ಬಂದಿರುವುದು (ಪು.10). ನಮ್ಮ ಪ್ರಯತ್ನ ಸ್ವಲ್ಪ ಸಾರ್ಥಕವಾದ ಸಮಾಧಾನ ತಂದಿದೆ.

ಆದರೆ ನಮ್ಮ ಮುಂದಿನ ಸವಾಲು ಅಪರಿಮಿತವಾಗಿದೆ. ಈ ನಿಟ್ಟಿನಲ್ಲಿ ನಿಮ್ಮ ಅನಿಸಿಕೆಗಳ ಬಗ್ಗೆ ಎರಡು ಮಾತನ್ನು ಬರೆದು ಕಳುಹಿಸಿದಲ್ಲಿ 'ಹಿತ್ತಲಗಿಡ'ದ ಭವಿಷ್ಯದ ಗುರಿ ನಿರ್ಧರಿಸಲು ಮಹದುಪಕಾರವಾಗಲಿದೆ.

ಡಾ. ಟಿ.ಎನ್. ಪ್ರಕಾಶ್ ಕಮ್ಮರಡಿ

'ಹಿತ್ತಲಗಿಡ'ದ ಹತ್ತು ವರ್ಷಗಳ ಸಾಧನೆಯ ಪಕ್ಷಿನೋಟ

ದಾಖಲಾತಿ ವಿವರ	1995	1996	1997	1998	1999	2000	2001	2002	2003	2004	ಒಟ್ಟು
1. ದೇಶೀಯ ಕೀಟ ಹತೋಟಿ	7	25	14	38	23	26	24	13	60	9	239
2. ಸಸ್ಯ ರೋಗ ನಿಯಂತ್ರಣ	4	14	2	2	4	7	7	2	1	1	44
3. ನಾಟಿ ಪಶು ಚಿಕಿತ್ಸಾಕ್ರಮಗಳು	23	24	22	38	41	53	22	24	33	9	289
4. ಬೀಜೋಪಚಾರ ಮತ್ತು ಧಾನ್ಯ ಸಂಗ್ರಹಣೆ	20	14	17	31	17	6	11	–	1	2	119
5. ಕಳೆ ನಿಯಂತ್ರಣ	1	–	3	1	–	–	–	–	1	–	6
6. ಪ್ರಾಣಿ ಪಕ್ಷಿಗಳ ಹಾವಳಿ ನಿಯಂತ್ರಣ	9	7	4	–	11	–	3	1	–	3	38
7. ದೇಶೀಯ ಜಾಣ್ಮೆ	7	8	3	8	15	6	21	6	5	7	86
8. ತಂತ್ರಜ್ಞಾನ ಮತ್ತು ಸಲಕರಣೆಗಳು	8	2	7	13	12	5	9	18	–	4	78
9. ನಾಟಿ ತಳಿಗಳು ಮತ್ತು ಜೀವ ವೈವಿಧ್ಯತೆ											
ಅ) ಬೀಜ ತಳಿಗಳು	–	72	1	44	26	30	4	1	21	1	200
ಬ) ಹಣ್ಣು ತರಕಾರಿ	375	–	4	–	34	13	–	2	–	–	428
ಕ) ಜಾನುವಾರುಗಳು	–	–	–	–	1	–	1	1	–	–	3
10. ನಾಟಿ ವೈದ್ಯ ಪದ್ಧತಿ	10	20	10	65	34	28	59	10	36	8	280
11. ಹಿತ್ತಲಗಿಡದ ವ್ಯಕ್ತಿಗಳು/ಸಾವಯವ ಕೃಷಿಕರು/ತಳಮಟ್ಟದ ಅನುಶೋಧಕರು	2	1	2	5	2	16	22	14	7	1	72
12. ದೇಶೀಯ ಆಹಾರ	3	–	2	12	13	15	1	6	1	3	56
13. ಸಾಮುದಾಯಿಕ ಕೃಷಿ ಪದ್ಧತಿಗಳು	4	9	13	15	2	3	5	5	3	1	60
14. ದೇಶೀಯ ಸಂಸ್ಥೆಗಳು : ಆಚರಣೆ ,	4	2	2	11	15	2	2	3	4	1	46
ನಂಬಿಕೆ – ಪರಿಸರ ಜ್ಞಾನ/ಸೂಚನೆ	41	5	–	–	25	–	–	14	–	–	85
15. ದೇಶೀಯ / ನಾಟಿ ಸುಸ್ಥಿರ ಕೃಷಿ ಸಾಹಿತ್ಯ	4	4	5	6	6	14	9	5	7	5	65
16. ಪ್ರಚಲಿತ ಲೇಖನಗಳು	8	6	5	8	9	10	3	2	5	1	57
ಒಟ್ಟು	530	213	116	297	290	234	203	127	185	56	2251

ಹಿತ್ತಲಗಿಡದ ಮೂಲಕ ಪುರಸ್ಕೃತರು

1) ಅಹಮದಾಬಾದಿನ ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ (1997) 6 ಮಂದಿ:

ಶ್ರೀ ಅಂಬಾಜಿ ತೇಲಂಗ, ಬೀದರ್, ಶ್ರೀ ಎಂ. ಜಿ. ನಾಗರಾಜ್, ಬೆಂಗಳೂರು, ಶ್ರೀ ಚೆನ್ನಪ್ಪ ಗೌಡರ್, ಬೆಂಗಳೂರು, ಶ್ರೀ ಸರು ದಿನೇಶ್, ತೀರ್ಥಹಳ್ಳಿ, ಶ್ರೀ ಜಿ.ಪಿ. ಹೆಗ್ಡೆ ಶಿರಸಿ, ಶ್ರೀ ಪಡಾರ್ ರಾಮಕೃಷ್ಣ ದಕ್ಷಿಣ ಕನ್ನಡ.

2) 'ಸೃಷ್ಟಿ' ಸನ್ಮಾನಿತರು 17 ಮಂದಿ:

ಶ್ರೀ ಭರಮಗೌಡರ್, ಧಾರವಾಡ (1998), ಶ್ರೀ ಅಂಬಾಜಿ ತೇಲಂಗ, ಬೀದರ್, ಶ್ರೀ ಬಸವರಾಜು, ಸಂತೇಶಿವರ (2000), ಶ್ರೀಮತಿ ಶಿವಮ್ಮ ದುಮ್ಮನ ಹಳ್ಳಿ, ಶ್ರೀಮತಿ ಮದ್ದೂರಮ್ಮ ತೇರು ಬೀದಿ, ಶ್ರೀಮತಿ ಜ್ಯೋತಿ, ಕುಡಿನೆಲ್ಲೆ ಶ್ರೀ ಬಾಲಕೃಷ್ಣ ಕಮ್ಮರಡಿ (2002), ಶ್ರೀ ಅಯ್ಯಪ್ಪ ಮಸಗಿ, ವೀರಾಪುರ, ಶ್ರೀ ಜಿ. ಕೃಷ್ಣ ಪ್ರಸಾದ್, ಬೆಂಗಳೂರು, ಶ್ರೀಮತಿ ಹೊಂಬಾಳಮ್ಮ ತಳಿ, ಶ್ರೀಮತಿ ಅನಸೂಯ ಎಸ್, ಶರ್ಮ, ಬೆಂಗಳೂರು, ಶ್ರೀ ವಿಜಯ ಅಂಗಡಿ, ಹಾಸನ **(2003), 2004ರಲ್ಲಿ ಐದು ಜನರಿಗೆ – ವಿವರ ಪುಟ 13.**


3) ರಾಷ್ಟ್ರೀಯ ಅನುಶೋಧನಾ ಪ್ರತಿಷ್ಠಾನದ ಸ್ಪರ್ಧೆಗಳಲ್ಲಿ

ಪ್ರಥಮ ಸುತ್ತಿನಲ್ಲಿ (2000) 12 ಮಂದಿ: ಶ್ರೀ ನರಸಿಂಹ ಭಂಡಾರಿ, ಕೊಪ್ಪ , ಶ್ರೀ ಅಣ್ಣಾ ಸಾಹೇಬ್ ಉದ್ಗಾವಿ, ಬೆಳಗಾಂ, ಶ್ರೀ ಶಿವಕುಮಾರ್ ಎ.ಆರ್. ಬೆಂಗಳೂರು , ಶ್ರೀ ಸುದರ್ಶನ, ಪುತ್ತೂರು, ಶ್ರೀ ನಾಗೇಂದ್ರಪ್ಪ, ಬೆಂಗಳೂರು, ಶ್ರೀ ಅಬ್ದುಲ್ ಖಾದರ್ ನಡಕಟ್ಟಿನ್, ಅಣ್ಣಿಗೇರಿ, ಶ್ರೀ ಕೃಷ್ಣಮೂರ್ತಿ, ಎನ್., ಬೆಂಗಳೂರು, ಶ್ರೀ ಕಪ್ಪಣ್ಣಗೌಡರ್, ಮೈಸೂರು, ಡಾ. ಕೃಷ್ಣಪ್ರಸಾದ್, ಪಿ.ಆರ್, ಮೈಸೂರು, ಶ್ರೀ ದಿನೇಶ್ ಬಿ.ಎಸ್., ತೀರ್ಥಹಳ್ಳಿ, ಶ್ರೀ ಬಸವರಾಜ ಸಂತೇಶಿವರ, ಹಾಸನ


ದ್ವಿತೀಯ ಸುತ್ತಿನಲ್ಲಿ (2002) 6 ಮಂದಿ: ಶ್ರೀ ಲಿಂಗಮಾದಯ್ಯ, ಚನ್ನಪಟ್ಟಣ, ಶ್ರೀ ರತ್ನಾಕರ, ಜಯಪುರ, ಶ್ರೀ ಹರಿಶ್ಚಂದ್ರ ಶೆಟ್ಟರ್, ಸೊಂಪಾಡಿ, ಶ್ರೀ ಎಂ.ಎಸ್.ವಿ. ನಾಯ್ಡು ಬನಶಂಕರಿ, ಶ್ರೀ ಪಿ. ನಾರಾಯಣ ಭಟ್ ಮತ್ತು ಶ್ರೀ ಜೋಸೆಫ್, ದಕ್ಷಿಣ ಕನ್ನಡ.

ತೃತೀಯ ಸುತ್ತಿನಲ್ಲಿ (2004): ಏಳು ಜನರಿಗೆ ಪ್ರಶಸ್ತಿ – ವಿವರ ಪುಟ 13

'ಹಿತ್ತಲಗಿಡ' ಬಳಗದ ಸದಸ್ಯತ್ವ ವಿವರ



ವೃತ್ತಿವಾರು ವಿವರ



ಪ್ರದೇಶವಾರು ವಿವರ

ಸಸ್ಯಜನ್ಯ ಕೀಟನಾಶಕಗಳು

ಕರ್ಣಂಪಟ್ಟಿ ಗ್ರಾಮದ ಕರೂರು ಜಿಲ್ಲೆಯ ರೈತ ಅರಸಪ್ಪನ್ ಭತ್ತ, ಹತ್ತಿ ಮತ್ತು ತರಕಾರಿಗಳಿಗೆ ತಗಲುವ ವಿವಿಧ ಕೀಟಗಳನ್ನು ನಿಯಂತ್ರಿಸುವಲ್ಲಿ ಸರಳವಾದ ಸಸ್ಯಜನ್ಯ ಕೀಟನಾಶಕಗಳನ್ನು ಬಳಸುತ್ತಿದ್ದಾರೆ. ಇವರು 1 ಕೆ.ಜಿ. ತಂಬಾಕಿನ ಕಡ್ಡಿ ಅರ್ಧ ಕೆ.ಜಿ. ಸದಾಪುಷ್ಪದ (*Vinca rosea*) ಎಲೆ, ಅರ್ಧ ಕೆ.ಜಿ. ಪಾರ್ಥೇನಿಯಂ, ಅರ್ಧ ಕೆ.ಜಿ. ತುಂಬೆ (*Leucas aspera*), 0.250 ಕೆ.ಜಿ ಈಶ್ವರ ಬಳ್ಳಿ (*Aristolochia indica*) ಯನ್ನು ಮಣ್ಣಿನ ಪಾತ್ರೆಯಲ್ಲಿ 10 ಲೀ ನೀರಿನೊಂದಿಗೆ ಬೆರೆಸಿ ಮಣ್ಣಲ್ಲಿ ಹೂತು ಹಾಕಿ ಪ್ರತಿ ದಿನ ಚೆನ್ನಾಗಿ ಮಿಶ್ರಣವನ್ನು ಕಲಕುತ್ತಾರೆ. ಈ ರೀತಿಯಲ್ಲಿ 15 ದಿನ ಹುದುಗಿದ 1 ಲೀ ಮಿಶ್ರಣಕ್ಕೆ 250 ಲೀ ಗೋಮೂತ್ರ ಮತ್ತು 10ಲೀ ನೀರು ಬೆರೆಸಿ ಸಂಜೆ ಸಮಯದಲ್ಲಿ ಬೆಳೆಗಳಿಗೆ ಸಿಂಪಡಿಸುತ್ತಾರೆ. ಮತ್ತೊಂದು ಸಸ್ಯಜನ್ಯ ಕೀಟನಾಶಕದಲ್ಲಿ ಇವರು 4 ಕೆ.ಜಿ. ತಂಬಾಕನ್ನು 5 ಲೀ ನೀರಿನಲ್ಲಿ ಅರ್ಧ ಗಂಟೆ ಕುದಿಸಿ ಇದಕ್ಕೂ 15 ಲೀ ಗೋಮೂತ್ರವನ್ನು ಮತ್ತು 40 ಲೀ ನೀರನ್ನು ಬೆರೆಸಿ ಸಿಂಪಡಿಸುತ್ತಾರೆ. ಇದರಿಂದ ಹೇನು, ಸೀರು ಮತ್ತು ಎಲೆ ಸುರುಳಿ ರೋಗಗಳಿಂದ ತರಕಾರಿ ಬೆಳೆಗಳಿಗಾಗುವ ಹಾನಿಯನ್ನು ನಿಯಂತ್ರಿಸುತ್ತಾರೆ.

ಕಾಯಿ ಕೊರಕಕ್ಕೆ ಮಜ್ಜಿಗೆ ಮದ್ದು: ಕಾಯಿಕೊರಕ ಹುಳುವಿನ ಬಾಧೆಗೆ ತುತ್ತಾಗಿರುವ ಹೊಲದಲ್ಲಿ ಕೆಲಸ ಮಾಡಿ ಸುಸ್ತಾದ ಬನಿಧನ್ ಮಲವಲ್‌ಜಿ ಭಾಯಿ ಗಢವಿ (ಖೇಡ ಜಿಲ್ಲೆ, ಗುಜರಾತ್) ಸುಧಾರಿಸಿಕೊಳ್ಳಲು ಮಜ್ಜಿಗೆ ಕುಡಿಯುತ್ತಿರುವಾಗ ವಿಚಾರವೊಂದು ಹೊಳೆಯಿತು. ಕೀಟ ನಿಯಂತ್ರಣಕ್ಕೆ ಮಜ್ಜಿಗೆ ಬಳಸಬಹುದೇ? ಎಂದಾಲೋಚಿಸಿ ಒಂದಿಷ್ಟು ಮಜ್ಜಿಗೆಯನ್ನು ಕೀಟದ ಮೇಲೆ ಸುರುವಿದ ಪರಿಣಾಮವಾಗಿ ಹುಳು ನಿಶ್ಚೇಷ್ಟಿತವಾಗಿ ಬಿದ್ದಿತು. ಮುಂದುವರೆದು ಹೊಸ ಉಪಾಯ ಹುಡುಕಿ 150 ಗ್ರಾಂ ಹುಣಸೆ ಹಣ್ಣು 150 ಗ್ರಾಂ ನಿಂಬೆ ಹಣ್ಣು 200 ಮಿಲಿ ಇಪೋಮಿಯದ ಕಷಾಯ ಹಾಗೂ 250 ಗ್ರಾಂ ತಂಬಾಕು ಸೇರಿಸಿದ ದ್ರಾವಣಕ್ಕೆ 15 ಲೀ ನೀರಿನೊಡನೆ ಬೆರೆಸಿ ಹತ್ತಿ ಬೆಳೆಗೆ ಸಿಂಪಡಿಸಿ ಕಾಯಿಕೊರೆವ ಹುಳುವನ್ನು ನಿಯಂತ್ರಿಸಿದ್ದಾರೆ. ಈ ಪ್ರಯೋಗವನ್ನು ಕಳೆದ 5 ವರ್ಷಗಳಿಂದ ನಡೆಸಿದ್ದು, ಪ್ರತಿ ಎಕರೆಗೆ 1200 ಕೆ.ಜಿ. ಹತ್ತಿ ಬೆಳೆದು ಸಾಹಸ ಮಾಡಿದ್ದಾರೆ.

ಆಧಾರ: ಹನಿ ಬೀ, 15(2), ಏಪ್ರಿಲ್-ಜೂನ್, 2004, ಪು.13 & 16.

ಶಲ್ಕ ಕೀಟ (ಬೂದಿ ತಿಗಣೆ) ನಿಯಂತ್ರಣಕ್ಕೆ: ಬೇಸಿಗೆಯಲ್ಲಿ ಕಾಳು ಮೆಣಸಿನ ಬಳ್ಳಿಗೆ ಶಲ್ಕ ಕೀಟದ ಕಾಟ ಹೆಚ್ಚು. ಈ ಸಮಯದಲ್ಲಿ ಮರಗೆಣಸು ಹಾಕಿ ಕುದಿಸಿದ ಬಿಸಿ ಕಷಾಯವನ್ನು ಬಳ್ಳಿಗೆ ಸುರಿಯುವುದರಿಂದ ಶಲ್ಕ ಕೀಟದ ಪೀಡೆಯನ್ನು ನಿಯಂತ್ರಿಸಬಹುದಾಗಿರುತ್ತದೆ ಎಂಬುದು ವಿ.ಜೆ. ಜೋಸೆಫ್, ವಾಲುಮ್ಮೇರ್‌ರ ಅನುಭವ.

ಇಂಗು: ಸಾಮಾನ್ಯಕ್ಕಿಂತ ಹೆಚ್ಚಾಗಿ ಮಳೆ ಬೀಳುವ ಪ್ರದೇಶಗಳಲ್ಲಿ ಮನೆಗಳ ಗೋಡೆಗಳ ಮಧ್ಯೆ ಆಲದಂತಹ ಕೆಲ ಮರಗಳು ಸಮಸ್ಯೆಯಾಗಿ ಬೆಳೆಯುತ್ತವೆ. ಎಷ್ಟೇ ಸಲ ಕಡಿದರೂ ಮತ್ತೆ ಮತ್ತೆ ಬೆಳೆಯುತ್ತಲೇ ಇರುತ್ತವೆ. ಇದರಿಂದಾಗಿ ಗೋಡೆಗಳು ಸೀಳು ಬಿಡುವವರೆಗೆ ಸಮಸ್ಯೆ ಕಾಣಿಸಿಕೊಳ್ಳುತ್ತದೆ. ಅಡಿಗೆಗೆ ಬಳಸುವ ಇಂಗನ್ನು ಪುಡಿ ಮಾಡಿ, ಗಿಡ ಕಡಿದ ಕಾಂಡದ ಮೇಲ್ಭಾಗಕ್ಕೆ ಸವರುವುದರಿಂದ ಈ ಸಮಸ್ಯೆಯ ಗಿಡಗಳು ಮತ್ತೆ ಬೆಳೆಯದಂತೆ ತಡೆಯಬಹುದು. ಎಂಬುದು ಪುರಿ ಜಿಲ್ಲೆಯ ರೈತ ಸುದರ್ಶನ ರಥರ ಅನುಭವ.

ದನಗಳ ಕಾಲು ಬಾಯಿ ರೋಗಕ್ಕೆ ಪಡುವಲ ಮದ್ದು

ಪಡುವಲಕಾಯಿಯನ್ನು ಚೆನ್ನಾಗಿ ಅರೆದು ನೀರಿನೊಂದಿಗೆ ಬೆರೆಸಿ ಪ್ರತಿದಿನ ಮುಂಜಾನೆ ಮತ್ತು ಸಂಜೆ ಕಾಲು ಬಾಯಿ ರೋಗದಿಂದ ಬಳಲುತ್ತಿರುವ ಪಶುವಿಗೆ 3 ದಿನದವರೆಗೆ ಕುಡಿಸಿ ರೋಗ ನಿದಾನ ಮಾಡುವಲ್ಲಿ ಉತ್ತರಾಂಚಲದ ಉದಮ ಸಿಂಗ ನಗರ ಜಿಲ್ಲೆಯ ಶಾಂತಿ ಪುರಿಭಗತ್‌ಪುರ ಗ್ರಾಮದ ರೈತ ಅಬ್ದುಲ್‌ವಹೀದ್ ಪ್ರಾಯೋಗಿಕ ಯಶಸ್ಸು ಪಡೆದಿದ್ದಾರೆ.

ದುಂಡು ಹುಳಕ್ಕೆ ಹೀರೆಕಾಯಿ ಔಷಧಿ


ಪಶುಗಳಲ್ಲಿ ದುಂಡು ಹುಳದ ಬಾಧೆ ತೀವ್ರವಾದಾಗ ಹಲವು ಸಲ ಮಾರಣಾಂತಿಕ ಹಂತವನ್ನು ತಲುಪಬಹುದು. 4-5 ಹೀರೆಕಾಯಿಯನ್ನು ಚೆನ್ನಾಗಿ ಅರೆದು ಗಾಯದ ಮೇಲೆ ಲೇಪಿಸಿ ಪಟ್ಟಿ ಕಟ್ಟುವುದರಿಂದ ದುಂಡು ಹುಳುವನ್ನು ನಿಯಂತ್ರಿಸಬಹುದಾಗಿರುತ್ತದೆ. ಪಟ್ಟಿಯನ್ನು ಪ್ರತಿ ದಿನಕ್ಕೊಮ್ಮೆ ಬದಲಾಯಿಸುತ್ತಿರಬೇಕಾಗುತ್ತದೆ. ಉತ್ತರಾಂಚಲದ ನೈನಿತಾಲ ಜಿಲ್ಲೆಯ ಬಿಂದು ಕುಟ್ಟಾ ಗ್ರಾಮದ ರೈತ ವಿಜಯಕುಮಾರ್‌ರವರು ಈ ಪ್ರಯೋಗವನ್ನು ಅಳವಡಿಸಿಕೊಂಡಿದ್ದಾರೆ.

ಆಡುಗಳ ವೈರಸ್ ರೋಗಕ್ಕೆ ಸಾಸಿವೆಯ ಘನೌಷಧಿ

ಆಡುಗಳು ಸಾಮಾನ್ಯವಾಗಿ ವೈರಸ್‌ನಿಂದ ಹರಡುವ ಸಾಂಕ್ರಾಮಿಕ ರೋಗಗಳಿಂದ ಬಳಲುತ್ತವೆ. ಆಪ್ತಾ ಎಂಬ ರೋಗದ ಲಕ್ಷಣದಲ್ಲಿ ಆಡುಗಳ ತುಟಿ ಮತ್ತು ಕಣ್ಣುಗಳ ಬಳಿ ಏಳುವ ಬೊಬ್ಬೆಗಳಿಂದ ಆಹಾರವನ್ನು ಜಗಿಯಲು ಕಷ್ಟಪಡುತ್ತವೆ. ಒರಿಸ್ಸಾದ ಕೊಂಡಮಲ್ ಜಿಲ್ಲೆಯ ಕೆಲ ಗ್ರಾಮಸ್ಥರು ಸಾಸಿವೆ ಕಾಳನ್ನು ಅರೆದು ಬೊಬ್ಬೆಗಳೆದ್ದಿರುವ ಭಾಗಕ್ಕೆ ಲೇಪಿಸುತ್ತಾರೆ. ಈ ರೀತಿಯಾಗಿ 5-6 ಲೇಪನಗಳಿಗೆ ಬೊಬ್ಬೆಗಳು ಮಾಯವಾಗುತ್ತವೆ, ಎಂಬ ವಿಧಾನವನ್ನು ಈ ಗ್ರಾಮದ ದೇಶಿ ವೈದ್ಯ ದುರ್ಯೋಧನ ಬಿಸ್ವಾಲ ತಿಳಿಸುತ್ತಾರೆ.

ಆಧಾರ: ಹನಿ ಬೀ, 15(2), ಏಪ್ರಿಲ್-ಜೂನ್, 2004, ಪು.14 & 15.

ಜಾನುವಾರುಗಳ ಕಾಲು ಬಾಯಿ ರೋಗಕ್ಕೆ ಅಣಬೆ ಮದ್ದು



ಒರಿಸ್ಸಾದ ನೀಲಗಿರಿ ಉಪ ವಿಭಾಗದ ಕೆಲ ಆದಿವಾಸಿ ಜನರು, ಜಾನುವಾರುಗಳಿಗೆ ತಗಲುವ ಕಾಲು ಬಾಯಿ ರೋಗಕ್ಕೆ ಅಣಬೆಯನ್ನು ಔಷಧವನ್ನಾಗಿ ಬಳಸುತ್ತಾರೆ. ಮಳೆಗಾಲದ ನಂತರ ಸಾಮಾನ್ಯವಾಗಿ ಸಿಗುವ "ಘಂಡ್ಯಾ ಚೌಟು" ಎನ್ನುವ ಅಣಬೆಯನ್ನು ಸಂಗ್ರಹಿಸಿ ಒಣಗಿಸಿಡುತ್ತಾರೆ. ಚಳಿಗಾಲದ ಅವಧಿಯಲ್ಲಿ ಕಾಲು-ಬಾಯಿ ರೋಗ ಕಾಣಿಸಿಕೊಳ್ಳುವುದರಿಂದ ಈ ಸಮಯದಲ್ಲಿ ಪಶುಗಳ ಸಾಮಾನ್ಯ ಆಹಾರದ ಜೊತೆ ಪ್ರತಿ ದಿನ ಒಂದೆರಡು ಅಣಬೆಗಳನ್ನು ತಿನ್ನಿಸುತ್ತಾರೆ.

ಆಧಾರ: ಹನಿ ಬೀ, 14(4) & 15(1) ಅಕ್ಟೋಬರ್ 2003 - ಮಾರ್ಚ್ 2004, ಪು 29

ತೋಳಗಳಿಂದ ಬೆಳೆ ರಕ್ಷಣೆ



ಸಮೃದ್ಧವಾಗಿ ಬೆಳೆದು ನಿಂತ ಶೇಂಗಾ, ಗೆಣಸು, ಮೆಕ್ಕೆ ಜೋಳ, ಟೊಮೆಟೊ ಮುಂತಾದ ಬೆಳೆಗಳಿಗೆ ತೋಳಗಳ ಕಾಟ ಹೆಚ್ಚಾದಾಗ ಗಡಥಾ (ಭಾವನಗರ ಜಿಲ್ಲೆ, ಗುಜರಾತ) ಗ್ರಾಮದ ರೈತ ಜಸ್ಮತ್ ಭಾಯ್ ಮೇಘಜಿಭಾಯಿ ಸುರಾನಿ ಒಂದು ವಿನೂತನ ಪ್ರಯೋಗ ನಡೆಸಿ ಈ ಸಮಸ್ಯೆಗೆ ಪರಿಹಾರ ಹುಡುಕಿದ್ದಾರೆ. ಇವರು ಮಾಡಿದ್ದಿಷ್ಟೇ, ತೆರೆದ ಬಾಯಿಯ ಮಣ್ಣಿನ ಪಾತ್ರೆಯಲ್ಲಿ 5-6 ದಿನದ ಹುಳಿ ಮಜ್ಜಿಗೆಯನ್ನು ಬೆಳೆಗಳ ಮಧ್ಯದಲ್ಲಿ ಅಲ್ಲಲ್ಲಿ ಇಟ್ಟರು. ಪಾತ್ರೆ ಒಣಗಿ ಬರಿದಾದಾಗ ಮತ್ತೆ ತುಂಬಿಟ್ಟರು. ಹೀಗೆ ಮಾಡಿದಾಗ ಹುಳಿ ಮಜ್ಜಿಗೆಯ ನಾತ ತೋಳಗಳಿಗೆ ಅಸಹನೀಯವಾಗಿ ಬೆಳೆಗಳ ಸಮೀಪ ಬರುತ್ತಿರಲಿಲ್ಲ, ಬೆಳೆ ಸುರಕ್ಷಿತವಾಗಿತ್ತು ಎಂದವರು ಹೇಳುತ್ತಾರೆ.

ಇಂಗಿನಿಂದ ಕೀಟ ಹತೋಟಿ

ಖೇಡ ಜಿಲ್ಲೆಯ ಖಬ್ಬೈನ ಮುವ್ವಾಡ ಗ್ರಾಮದ ರೈತ ಮೂಲಜಿಭಾಯ್ ಕನಾಭಾಯ್ ಪಟೇಲ ಕಳೆದ 3 ವರ್ಷಗಳಿಂದ ಇಂಗನ್ನು ಬಳಸಿ ಬದನೆಕಾಯಿಗೆ ಬಿಳಿ ನೊಣದ ಪೀಡೆಯನ್ನು ನಿಯಂತ್ರಿಸಿದ್ದಾರೆ. 10 ಗ್ರಾಂ ಇಂಗನ್ನು (ಸಣ್ಣ ಪ್ಯಾಕೇಟ್‌ನಲ್ಲಿಟ್ಟು) ನೀರು ಕಾಲುವೆಗಳಲ್ಲಿ ಇಡುವುದರಿಂದ ನೀರಲ್ಲಿ ಬೆರೆತ ಇಂಗಿನ ಕಟು ವಾಸನೆ ಕೀಟಗಳನ್ನು ದೂರವಿಡುವ ಕೆಲಸ ಮಾಡಿರುವುದಾಗಿ ಹೇಳುತ್ತಾರೆ. ಇದೇ ಪ್ರಯೋಗವನ್ನು ಗೋಧಿಯ ಹೊಲದಲ್ಲಿ ಗೆದ್ದಿಲು ನಿಯಂತ್ರಣಕ್ಕೆ ಇವರು ಬಳಸಿರುವುದಾಗಿ ಹೇಳುತ್ತಾರೆ.

ಆಧಾರ: ಹನಿ ಬೀ - 14 (4) & 15(1) ಅಕ್ಟೋಬರ್ 03-ಮಾರ್ಚ್ 04 ಪು. 27 & 29

ಪೈರಿಲ್ಲಾ ನಿಯಂತ್ರಣಕ್ಕೆ ಪರ್ಯಾಯ ಮೇವಿನ ಬೆಳೆ

ಪೈರಿಲ್ಲಾ ಕೀಟದ ಬಾಧೆ ಕಬ್ಬು ಬೇಸಾಯಗಾರರ ನಿದ್ರೆ ಕೆಡಿಸುವಂತಹದ್ದು. ಕೀಟದ ಬಾಧೆಯಿಂದ ಜಿಗುಟಾದ ಮೇಣದಂಥ ಸೋರಿಕೆ ಎಲೆ ಮತ್ತು ಕಾಂಡದ ಮೇಲೆ ಚಳಿಗಾಲದಲ್ಲಿ ಕಾಣಸಿಗುತ್ತದೆ. ಉತ್ತರಾಂಚಲದ ನೈನಿತಾಲ ಜಿಲ್ಲೆಯ ಚಾಮುಲನಾಥಪುರದ ರೈತ ಜೀವನ ಸಿಂಗ ಬಿಷ್ಟ ಈ ಕೀಟಗಳನ್ನು ತನ್ನ ಮೇವಿನ ಬೆಳೆಗಳಲ್ಲಿ ಇರುವದನ್ನು ಗಮನಿಸಿದ. ನಂತರ ಕಬ್ಬಿನ ಬೆಳೆಯ ಸುತ್ತ ಮೇವಿನ ಬೆಳೆಗಳನ್ನು ಬೆಳೆದಾಗ ಶೇ 70-80ರಷ್ಟು ಕೀಟಗಳು ಮೇವಿನ ಬೆಳೆಯಲ್ಲಿ ಕಂಡು ಬಂದು ಕಬ್ಬಿನ ಬೆಳೆ ಸುರಕ್ಷಿತವಾಗಿತ್ತು.


ಆಧಾರ: ಹನಿ ಬೀ, 15(2), ಏಪ್ರಿಲ್-ಜೂನ್, 2004, ಪು.14.

ಸಾಂಬಾರ್ ಉಪ್ಪಾದರೆ ಬೆಪ್ಪಾಗಬೇಡಿ

ಮನೆಯಲ್ಲಿ ದಿನ ನಿತ್ಯ ಊಟಕ್ಕೆ ತಯಾರಿಸುವ ಸಾಂಬಾರ್‌ನಲ್ಲಿ ಅಪ್ಪಿತಪ್ಪಿ ಉಪ್ಪು ಜಾಸ್ತಿಯಾದರೆ, ಸಾಂಬಾರ್ ಇರುವ ಪಾತ್ರೆಗೆ ಸುಡುವ ಗಟ್ಟಿ ಬೆಂಕಿ ಕೆಂಡವನ್ನು ಅದ್ದಿದರೆ ಅದು ಉಪ್ಪಿನಂಶವನ್ನು ಹೀರಿಕೊಂಡು ಸಾಂಬಾರ್‌ನಲ್ಲಿನ ಹೆಚ್ಚುವರಿ ಉಪ್ಪಿನಂಶ ಕಡಿಮೆಯಾಗುತ್ತದೆ ಎಂಬುದು ಮದುವೆ ಮತ್ತಿತರ ಸಮಾರಂಭಗಳಿಗೆ ಅಡಿಗೆ ತಯಾರು ಮಾಡಿ ಕೊಡುವ ಕಾಯಕದಲ್ಲಿ ನಿರತ ರೈತ ಹಾಸನ ಜಿಲ್ಲೆ ಮಲ್ಲಿಕಾರ್ಜುನಪುರದ ಶಂಕರೇಗೌಡರ ಅನುಭವ ಮತ್ತು ಅಭಿಪ್ರಾಯ.

ಸಂಗ್ರಹ: ಸಿದ್ಧರಾಮೇಗೌಡ

ಮೀನುಗಳಿಂದ ದನದ ಉಣ್ಣೆ ನಿಯಂತ್ರಣ



ಒರಿಸ್ಸಾದ ಅತಮಲಿಕ್ ಉಪವಿಭಾಗದ ಗ್ರಾಮಸ್ಥರು ಎಮ್ಮೆಗಳಿಗೆ ಉಣ್ಣೆಗಳ ಕಾಟ ಹೆಚ್ಚಾದಾಗ ಕಾಳು ಮೆಂತೆಯನ್ನು ರಾತ್ರಿ ಇಡಿ ನೀರಲ್ಲಿ ನೆನೆಸಿ ನಂತರ ಅರೆದು ಎಮ್ಮೆಗಳಿಗೆ ಸವರುತ್ತಾರೆ. ಹೀಗೆ ಸವರಿದ ಎಮ್ಮೆಗಳನ್ನು ನೀರಲ್ಲಿಳಿಸಿದಾಗ ಮೆಂತೆಯ ವಾಸನೆಗೆ ಆಕರ್ಷಿತವಾಗಿ ಬಂದ ಮೀನುಗಳು ಉಣ್ಣೆಗಳನ್ನು ನುಂಗಿ ಹಾಕುತ್ತವೆ ಎಂಬುದು ಈ ಗ್ರಾಮಸ್ಥರ ಅನುಭವ.

ಆಧಾರ: ಹನಿ ಬೀ, 14(4) & 15(1), ಅಕ್ಟೋಬರ್ 03-ಮಾರ್ಚ್ 04, ಪು.29.

ಕಾಳು ಮೆಣಸಿಗೆ ವಿನೂತನ ಕಸಿ

ಕಾಳು ಮೆಣಸಿನ ಬಳ್ಳಿಯ ಬೇರಿಗೆ ಬಹಳ ಬೇಗ ರೋಗ ಬಂದು ಬಳ್ಳಿ ಒಣಗುತ್ತದೆ. ಇದಕ್ಕೆ ಪರಿಹಾರವಾಗಿ ಗಿಡ ಹಿಪ್ಪಲಿಗೆ ಕಾಳು ಮೆಣಸು ಬಳ್ಳಿಯನ್ನು ಕಸಿ ಮಾಡಿದಾಗ ಬೇರುರೋಗದ ಸಮಸ್ಯೆ ನಿವಾರಣೆಯಾಗುತ್ತದೆ. ಹಿಪ್ಪಲಿ ಗಿಡದ ಬೇರು ಬಹಳ ದಪ್ಪವಾಗಿದ್ದು ಸದೃಢವಾಗಿರುವುದರಿಂದ ಕಾಳು ಮೆಣಸಿನ ಬಳ್ಳಿಯು ಬಹಳ ಬೇಗ ಬೆಳವಣಿಗೆಯಾಗಿ ಕಾಯಿ ನೀಡುತ್ತದೆ. ಬೆಳ್ತಂಗಡಿ ತಾಲ್ಲೂಕು ಅಮ್ಡಾಲು ಮನೆಯ ರವಿಶಂಕರ ಈ ಪ್ರಯೋಗವನ್ನು ಕಳೆದ ಹಲವಾರು ದಿನಗಳಿಂದ ನಡೆಸಿರುತ್ತಾರೆ.

ಬಿದಿರಿಲ್ಲದೆ ಅಗರಬತ್ತಿ

ಅಗರಬತ್ತಿ ತಯಾರಿಕೆಯಲ್ಲಿ ಕಚ್ಚಾವಸ್ತುವಾಗಿ ಬಿದಿರು ಬೇಕೇ ಬೇಕು. ಬಿದಿರನ್ನು ಸಣ್ಣದಾಗಿ ಸೀಳಿ ಸುಗಂಧಯುಕ್ತ ವಸ್ತುವನ್ನು ಲೇಪಿಸಿ ಒಣಗಿಸುವದು ತಿಳಿದದ್ದೇ. ಆದರೆ, ಅಮ್ಡಾಲಿನ ರವಿಶಂಕರ, ಬಿದಿರಿನ ಸಹಾಯವಿಲ್ಲದೇ ಕಡ್ಡಿಗಾತ್ರದ ಅಗರಬತ್ತಿ / ಧೂಪವನ್ನು ತಯಾರಿಸುತ್ತಿದ್ದಾರೆ. ಈ ಅಗರಬತ್ತಿಯ ವಿಶೇಷವೆಂದರೆ ಕಾಡಿನಲ್ಲಿ ಸಿಗುವ ಹೆಬ್ಬಲಸಿನ ಹೂವಿನ ಕಡ್ಡಿಯಿಂದ ಇದನ್ನು ತಯಾರಿಸುವದು. ಜನವರಿಯಿಂದ ಮಾರ್ಚ್ ತಿಂಗಳವರೆಗೆ ಉದುರಿ ಬಿದ್ದ ಹೂಗಳನ್ನು ನೀರಲ್ಲಿ ನೆನೆಸುತ್ತಾರೆ. ನೆಟ್ಟಗಾದ ಈ ಕಡ್ಡಿಯನ್ನು ಒಣಗಿಸಿ ಅತ್ತರಿನಲ್ಲಿ ಮುಳುಗಿಸಿ ಒಣಗಿಸಿಟ್ಟರಾಯಿತು - ಬೇಕಾದಾಗ ಬಳಸಬಹುದು. ಬೆಂಕಿ ತಾಗಿಸಿದ ಈ ಕಡ್ಡಿ ಅರ್ಧ ಗಂಟೆವರೆಗೆ ಪರಿಮಳ ಸಮೇತ ಉರಿಯುತ್ತದೆ. ಕಾಡು ಪ್ರದೇಶದಲ್ಲಿ ಈ ಹೂಗಳ ಲಭ್ಯತೆ ಹೆಚ್ಚಾಗಿರುವಾಗ ಬಿದಿರಿಲ್ಲದೆ ಇಂತಹ ಅಗರಬತ್ತಿಗಳನ್ನು ತಯಾರಿಸಬಹುದು.

(ವಿ.ಸೂ. ಈ ಎರಡೂ ಅನುಶೋಧನೆಗಳನ್ನು ರಾಷ್ಟ್ರೀಯ ಅನುಶೋಧನಾ ಪ್ರತಿಷ್ಠಾನದ ನಾಲ್ಕನೇ ಸುತ್ತಿನ ಸ್ಪರ್ಧೆಗೆ ಕಳುಹಿಸಿ ಕೊಡಲಾಗಿದೆ).

ಉತ್ತಮ ಬೆಳೆಗೆ ಕುದಿಸಿ ಬಿಸಾಡುವ ಚಹಾ ಪುಡಿ



ಚಹಾ ಕುಡಿದ ನಂತರ ಚಹಾಪುಡಿಯದೇನು ಕೆಲಸ? ಬಿಸಾಕುವವರೇ ಹೆಚ್ಚು, ಆದರೆ ಒರಿಸ್ಸಾದ ಅಂಗೋಲ ಜಿಲ್ಲೆಯ ತೈನ್ಸಿ ಗ್ರಾಮದ ರೈತ ಶ್ರೀ ಅಂತರ್ಯಾಮಿ ಪ್ರಧಾನ, ಮೆಣಸಿನ ಕಾಯಿ ಗಿಡದ ಬುಡಕ್ಕೆ ಕುದಿಸಿ ಉಳಿದ ಚಹಾಪುಡಿ ಹಾಕಿ ಉತ್ತಮ ಫಸಲು ಪಡೆದಿರುವುದಾಗಿ ತಿಳಿದಿರುತ್ತದೆ. ಚಹಾದಲ್ಲಿರುವ ಎನ್-ಟ್ರಯಾಕಂಟೋನಲ್ ಎಂಬ ರಸಾಯನ ಉತ್ತಮ ಬೆಳೆಗೆ ಕಾರಣ ಎಂಬುದನ್ನು ಹಲವು ಕೃಷಿ ವಿಶ್ವವಿದ್ಯಾಲಯಗಳ ಪ್ರಯೋಗಗಳು ತಿಳಿಸಿವೆ.

ಹನಿ ಬೀ - 14 (4) & 15(1) ಅಕ್ಟೋಬರ್ 2003 - ಮಾರ್ಚ್ 2004, ಪು. 30.

ಹಳ್ಳಿಗರ ನೀರು ಕಾಯಿಸುವ ಯಂತ್ರಗಳು

ಲೇಖನ: ಚಂದ್ರಶೇಖರಪ್ರಸಾದ್. ಜಿ

ದಿನ ನಿತ್ಯ ಸ್ನಾನಕ್ಕೆ ಬಿಸಿ ನೀರು ಕಾಯಿಸುವ ಕೆಲಸ ಬಹುತೇಕ ಜನರನ್ನು ಯೋಚನೆಗೀಡು ಮಾಡುವ ವಿಷಯ. ಅದರಲ್ಲೂ ಗ್ರಾಮೀಣ ಪ್ರದೇಶಗಳ ಮನೆಯಲ್ಲಿ ಈ ಕೆಲಸಕ್ಕಾಗಿ ಯಾರಾದರೊಬ್ಬರು ಬಿಸಿ ಬೆಂಕಿಯ ಮುಂದೆ, ಹೊಗೆಯಲ್ಲಿ ಕಣ್ಣೀರು ಹಾಕುತ್ತಾ, ಗಂಟೆಗಟ್ಟಲೆ ಜೀವ ತೇಯಬೇಕಾಗುತ್ತದೆ. ಮಹಿಳೆಯರಂತೂ ಕಟ್ಟಿಗೆ ತುಂಡುಗಳನ್ನು ಸಂಗ್ರಹಿಸಲು ಬಹು ದೂರ ದಾರಿ ಸವೆಸಬೇಕಾಗುತ್ತದೆ. ಈ ಕೆಲಸಕ್ಕಾಗಿ ಹೊಸ ತಂತ್ರಜ್ಞಾನ/ ಉಪಕರಣಗಳು ಮಾರುಕಟ್ಟೆಯಲ್ಲಿ ಲಭ್ಯವಿದ್ದರೂ, ಅವು ಹೆಚ್ಚು ದುಬಾರಿಯಾಗಿದ್ದು ಸಾಮಾನ್ಯ ಜನರಿಗೆ ನಿಲುಕದಂತಾಗಿದೆ. ಇದಕ್ಕೆ ಪರಿಹಾರೋಪಾಯವಾಗಿ ರೈತರಿಬ್ಬರು ಸಂಶೋಧಿಸಿರುವ ಎರಡು ಉಪಕರಣಗಳ ವಿವರ ಇಲ್ಲಿದೆ.

ಅಣೆಕಟ್ಟೆ ಬಾಯ್ಲರ್

ತುಮಕೂರು ಜಿಲ್ಲೆಯ ಚಿಕ್ಕನಾಯಕನ ಹಳ್ಳಿ ತಾಲ್ಲೂಕಿನ ಅಣೇಕಟ್ಟೆ ಗ್ರಾಮದ ಕೃಷಿಕರಾದ ಶಂಕರಲಿಂಗಯ್ಯ, ಕೇವಲ 2 ನಿಮಿಷದಲ್ಲೇ ನೀರು ಬಿಸಿಯಾಗಿಸುವ ಒಲೆಯೊಂದನ್ನು ಕಂಡು ಹಿಡಿದಿದ್ದಾರೆ!. ತೋಟದ ಅಡಿಕೆ ಗಿಡಗಳ ಬುಡದ ತೇವಾಂಶ ಕಾಪಾಡಲು ಅಗತ್ಯವಾದ ತೋಟದ ತ್ಯಾಜ್ಯವೆಲ್ಲಾ ನೀರು ಕಾಯಿಸಲು ಬರಿದಾಗುತ್ತಿತ್ತು. ಇದಕ್ಕೆ ಪರಿಹಾರವಾಗಿ ಹಲವು ಪ್ರಯತ್ನಗಳ ಮೂಲಕ ತಮ್ಮದೇ ತಂತ್ರಜ್ಞಾನದ ಈ ನೂತನ ಒಲೆಯನ್ನು ರೂಪಿಸಿದ್ದಾರೆ. ಒಂಭತ್ತನೇ ತರಗತಿಯವರೆಗೆ ಮಾತ್ರ ವಿದ್ಯಾಭ್ಯಾಸ ಮಾಡಿರುವ ಇವರು ಲೋಹದ ವೃತ್ತಾಕಾರದ ಒಲೆಯೊಳಗೆGI ಪೈಪುಗಳ್ನು ತಮ್ಮದೇ ವಿಧಾನದಲ್ಲಿ ಸುರುಳಿಯಾಗಿ ಜೋಡಿಸಿದ್ದು ಮೇಲ್ಭಾಗದಿಂದ ನೀರು ಹರಿಸಿ ಉರುವಲು ಹಾಕಿದರೆ, ಅದು ಇನ್ನೊಂದು ಕಡೆ ಬರುವುದರೊಳಗೆ ಬಿಸಿಯಾಗಿರುತ್ತದೆ.



ಈ ಬಾಯ್ಲರ್‌ನಿಂದ ಸಾಂಪ್ರದಾಯಿಕ ಒಲೆಯಂತೆ ಕಟ್ಟಿಗೆಯಲ್ಲದೆ, ಕಸಕಡ್ಡಿಯನ್ನು ಬಳಸಿ ನೀರು ಬಿಸಿ ಮಾಡಬಹುದು. ಒಂದು ನಿಮಿಷಕ್ಕೆ ನಾಲ್ಕು ಲೀಟರ್ ಬಿಸಿ ನೀರು ಹೊರ ಬರುವ ಈ ಉಪಕರಣಕ್ಕೆ ತಗಲುವ ವೆಚ್ಚ 4500 ರೂಪಾಯಿಗಳಾಗಿರುತ್ತದೆ. ಈ ಬಾಯ್ಲರ್‌ನಿಂದ ಸಾಂಪ್ರದಾಯಿಕ ಒಲೆಗೆ ಬಳಸುವ ಉರುವಲಿನ ಪ್ರಮಾಣದಲ್ಲಿ ಶೇಕಡ 80ರಷ್ಟು ಉಳಿಸಿ ಅಷ್ಟೇ ಪ್ರಮಾಣದ ನೀರು ಬಿಸಿ ಮಾಡಬಹುದು. "ಕೇವಲ 5-6 ತೆಂಗಿನ ಮಟ್ಟೆಗಳಿಂದ ನಮ್ಮ ಐದು ಜನರ ಕುಟುಂಬದ ದಿನ ನಿತ್ಯದ ಸ್ನಾನಕ್ಕೆ ಸಾಕಷ್ಟು ನೀರು ಕಾಯಿಸಿ ಕೊಳ್ಳುತ್ತಿದ್ದೇವೆ" ಎಂದು ಹೇಳುವ ಶಂಕರಲಿಂಗಯ್ಯನವರು ತಮ್ಮ ಊರಿನ ಮೇಲಿನ ಅಭಿಮಾನದಿಂದ ಈ ಉಪಕರಣಕ್ಕೆ **"ಅಣೆಕಟ್ಟೆ ಬಾಯ್ಲರ್"** ಎಂದು ಹೆಸರಿಟ್ಟಿದ್ದಾರೆ.

ಗೋಬರ್ ಗ್ಯಾಸ್ ಗೀಸರ್

ಹಾಸನ ಜಿಲ್ಲೆಯ ಬೇಲೂರು ತಾಲ್ಲೂಕಿನ ಮಲ್ಲಿಕಾರ್ಜುನಪುರ ಗ್ರಾಮದ ಯುವ ರೈತ ನಂದೀಶ್, ತಮ್ಮ ಮನೆಯ ಸಾಂಪ್ರದಾಯಿಕ ಒಲೆಯಿಂದ ದಿನ ನಿತ್ಯದ ಸ್ನಾನಕ್ಕೆ ಬಿಸಿ ನೀರು ಕಾಯಿಸುವ ಗೋಳಿಗೆ ಪರಿಹಾರವಾಗಿ, ಗೋಬರ್ ಗ್ಯಾಸ್‌ನಿಂದ ನೀರು ಬಿಸಿಯಾಗಿಸುವ "ಗೀಸರ್" ತರಹದ ಉಪಕರಣವೊಂದನ್ನು ಕಂಡು ಹಿಡಿದಿದ್ದಾರೆ.



ಪ್ರೌಢ ಶಾಲಾ ಶಿಕ್ಷಣವನ್ನು ಮುಗಿಸಿರುವ ಇವರು, ತಮ್ಮದೇ ವಿಧಾನದಲ್ಲಿ ತಾಮ್ರದ ಪೈಪುಗಳನ್ನು ಸುರುಳಿಯಾಕಾರದಲ್ಲಿ ಸುತ್ತಿರುವ, ಈ ವ್ಯವಸ್ಥೆಗೆ ಓವರ್‌ಹೆಡ್ ಟ್ಯಾಂಕ್‌ನಿಂದ ನೀರು ಹಾಯಿಸಿ, ಕೆಳಗಡೆ ಅಳವಡಿಸಿರುವ ಗ್ಯಾಸ್ ಬರ್ನರ್ ಹೊತ್ತಿಸಿದರೆ, ನೀರು ಪೈಪಿನ ಒಂದು ತುದಿಯಿಂದ ಇನ್ನೊಂದು ತುದಿಗೆ ಬರುವಷ್ಟರಲ್ಲಿ ಬಿಸಿಯಾಗಿರುತ್ತದೆ. ಕೇವಲ ಎರಡೇ ನಿಮಿಷದಲ್ಲಿ ನೀರು ಬಿಸಿಯಾಗುವ ಈ ಉಪಕರಣಕ್ಕೆ ತಗಲುವ ವೆಚ್ಚ 800 ರೂಪಾಯಿಗಳಾಗಿರುತ್ತದೆ. "ಕಡಿಮೆ ಗ್ಯಾಸ್ ಬಳಸಿ ನೀರು ಬಿಸಿ ಮಾಡುವ ಈ ಉಪಕರಣಕ್ಕೆ ಅಗತ್ಯ ಬಿದ್ದಾಗ ಸಿಲಿಂಡರ್ ಗ್ಯಾಸನ್ನು (LPG) ಅಳವಡಿಸಿಕೊಳ್ಳಬಹುದು" ಎನ್ನುತ್ತಾರೆ ನಂದೀಶ್. ಸದ್ಯದಲ್ಲಿ ಗೋಬರ್ ಗ್ಯಾಸ್ ಬಳಸಿ ನೀರು ಕಾಯಿಸುವ ಈ ಉಪಕರಣಕ್ಕೆ **ಗೋಬರ್ ಗ್ಯಾಸ್ ಗೀಸರ್** ಎಂದೇ ಕರೆಯುತ್ತಿದ್ದಾರೆ.

ದುಬಾರಿಯಾಗುತ್ತಿರುವ ಉರುವಲು ಬೆಲೆಗಳಿಂದಾಗಿ, ಪರ್ಯಾಯ ಇಂಧನ ಮತ್ತು ಇಂಧನ ಉಳಿತಾಯ ತಂತ್ರಜ್ಞಾನ/ ಉಪಕರಣಗಳತ್ತ ಜನರು ಮತ್ತು ಆಳುವ ಸರ್ಕಾರಗಳು ಯೋಚಿಸುತ್ತಿರುವ ಈ ಸಂದರ್ಭದಲ್ಲಿ ಪರಿಸರ ಸ್ನೇಹಿಯಾಗಿದ್ದು ಮಹಿಳೆಯರ ಮೇಲಿನ ಕೆಲಸದೊತ್ತಡ ಕಡಿಮೆ ಮಾಡಿ, ಗ್ರಾಮೀಣ ಜೀವನದ ವಾತಾವರಣವನ್ನು ಉತ್ತಮಪಡಿಸಬಲ್ಲ ಕಡಿಮೆ ಬೆಲೆ ಹಾಗು ಸುಲಭ ತಂತ್ರಜ್ಞಾನದ ಇಂತಹ ತಳಮಟ್ಟದ ಅನುಶೋಧನೆಗಳು ಹೆಚ್ಚು ಪ್ರಸ್ತುತವಾಗಿದ್ದು ಸೂಕ್ತ ಪ್ರೋತ್ಸಾಹ ಮತ್ತು ಪ್ರಚಾರ ಅಗತ್ಯವಾಗಿದೆ.

ವಿ.ಸೂ. ಈ ಎರಡೂ ಅನುಶೋಧನೆಗಳನ್ನು ರಾಷ್ಟ್ರೀಯ ಅನುಶೋಧನಾ ಪ್ರತಿಷ್ಠಾನದ ನಾಲ್ಕನೇ ಸುತ್ತಿನ ಸ್ಪರ್ಧೆಗೆ ಕಳುಹಿಸಿ ಕೊಡಲಾಗಿದೆ.

ವೆನಿಲ್ಲಾ ಡ್ರೈಯರ್



ವೆನಿಲ್ಲಾ ಬೆಳೆ ಲಾಭದಾಯಕ ಎಂದೆನಿಸಲು ಬೆಳೆಗಿಂತ ಹೆಚ್ಚಿನ ಲಕ್ಷ್ಯ ಸಂಸ್ಕರಣೆಗೆ ಅವಶ್ಯವಿರುತ್ತದೆ. ಮಲೆನಾಡಿನ ಮಳೆಗಾಲದಲ್ಲಿ ಬಿಸಿಲಿನ ಅಲಭ್ಯತೆಯಿಂದಾಗಿ ಅಪೂರ್ತಿಯಾದ ಸಂಸ್ಕರಣೆಯಿಂದ ವೆನಿಲ್ಲಾದ ಲಾಭ ಅಷ್ಟಕ್ಕಷ್ಟೇ ಆಗುವದುಂಟು. ಈ ಸಮಸ್ಯೆಗೆ ಪರಿಹಾರವಾಗಿ ಪುತ್ತೂರಿನ ಶಾರದಾಂಬ ಇಂಜಿನಿಯರಿಂಗ್‌ನ ಕೆ. ಶ್ಯಾಂಭಟ್ ಮತ್ತು ಅವರ ಮಗ ಶಿವಕುಮಾರ್ 30" ಉದ್ದ 18" ಅಗಲ, 28" ಎತ್ತರದ ವೆನಿಲ್ಲ ಡ್ರೈಯರ್ ರೂಪಿಸಿದ್ದಾರೆ. 26" ಉದ್ದ10" ಅಗಲದ ಒಂದೊಂದು ಡ್ರಾಯರ್‌ಗಳಿದ್ದು ಒಟ್ಟು5 ಡ್ರಾಯರ್‌ಗಳಿಂದ 5 ಕಿಲೋ ವೆನಿಲ್ಲಾ ಕೋಡನ್ನು ಗ್ಯಾಸ್ ಸಿಲಿಂಡರ್ ಬಳಸಿ ಒಣಗಿಸಬಹುದಾಗಿರುತ್ತದೆ. ಉಷ್ಣಾ ಮಾಪಕವನ್ನು ಅಳವಡಿಸಿದ ಈ ಸಾಧನದಲ್ಲಿ ನಿಯಂತ್ರಿತ ಉಷ್ಣತೆಯಲ್ಲಿ 5 ಕಿಲೋ ಹಸಿ ಕೋಡನ್ನು 90 ನಿಮಿಷದಲ್ಲಿ ಒಣಗಿಸಬಹುದಾಗಿರುತ್ತದೆ. 14.2 ಕಿಲೋ ತೂಕದ ಸಿಲಿಂಡರ್ 80 ಗಂಟೆವರೆಗೆ ಬಳಸಬಹುದಾಗಿದ್ದು ಈ ಡ್ರೈಯರ್‌ನ ಬೆಲೆ ರೂ.7500 ಇರುತ್ತದೆ.

ಕಳೆದ 3-4 ವರ್ಷಗಳಿಂದ ಬಳಕೆಯಲ್ಲಿರುವ ಈ ಸಾಧನವನ್ನು ವಿದ್ಯುತ್/ ಗೋಬರ್ ಗ್ಯಾಸ್ / ಕೃಷಿ ತ್ಯಾಜ್ಯ ಮತ್ತು ಉರುವಲು ಬಳಸಿ ಮತ್ತಷ್ಟು ವ್ಯವಸ್ಥಿತಗೊಳಿಸಬಹುದಗಿರುತ್ತದೆ ಎಂದು ಶ್ಯಾಂಭಟ್ಟರ ಅನಿಸಿಕೆ.

ಹುಲ್ಲು ಕೊಚ್ಚುವ ಯಂತ್ರ

ಹೈನುಗಾರಿಕೆಯನ್ನೇ ಕಸುಬನ್ನಾಗಿ ರೂಢಿಸಿಕೊಂಡವರಿಗೆ ಪಶುಗಳಿಗೆ ಹಸಿರು ಮೇವು ಕೊಡುವಷ್ಟೇ ಪ್ರಾಮುಖ್ಯತೆ, ಅದನ್ನು ಸಣ್ಣದಾಗಿ ತುಂಡರಿಸಿ ಕೊಡುವಲ್ಲಿ ಇದೆ. ಈ ರೀತಿ ಮೇವನ್ನು ತುಂಡುಮಾಡಲು ಮೇವು ಕತ್ತರಿಸುವ ಯಂತ್ರ ಬೇಕಾಗುತ್ತದೆ. ಈ ಯಂತ್ರಗಳು ಮಾರುಕಟ್ಟೆಯಲ್ಲಿ ದುಬಾರಿ. ಎರಡು ವರ್ಷಗಳ ಹಿಂದೆ, ದಕ್ಷಿಣ ಕನ್ನಡ ಜಿಲ್ಲೆ ಪುಂಜಾಲಕಟ್ಟೆಯ ಕಂಜರ್ಪಣೆಗೆ ರಾಮಚಂದ್ರಯ್ಯನವರಿಗೆ, ಮೇವಿನ ಬೆಲೆ ದುಬಾರಿಯಾದ ಸಂದರ್ಭದಲ್ಲಿ ದನಗಳು ಹಾಕುವ ಹುಲ್ಲನ್ನು ಎಳೆದೆಳೆದು ಸಗಣಿಯಲ್ಲಿ ಸೇರಿಸಿ ಸಮಸ್ಯೆ ಮಾಡಿದ್ದವು. ಮೇವು ಕತ್ತರಿಸುವ ಯಂತ್ರದ ಮಾರುಕಟ್ಟೆಯ ಬೆಲೆ ರೂ.8000 ಎಂಬುದನ್ನು ಕೇಳಿ ಕೈಚೆಲ್ಲದೆ ಇವರು ಈ ಹೊಸ ಪ್ರಯೋಗ ನಡೆಸಿದರು. ಗುಜರಿ ಅಂಗಡಿಯಿಂದ ತಂದ ಕಬ್ಬಿಣದ ಪಟ್ಟಿಗೆ ಮಧ್ಯೆ ಹಳೆಯ ಮಚ್ಚನ್ನು ವೆಲ್ಡ್ ಮಾಡಿ ಪಟ್ಟಿಯ ಒಂದು ತುದಿಗೆ ಬೋಲ್ಟ್ ಹಾಕಲು ವ್ಯವಸ್ಥೆಮಾಡಿದರು. ಈ ಪಟ್ಟಿ ಮೇಲೆ ಕೆಳಗೆ ಹೋಗುವ ಹಾಗೆ ಇನ್ನೊಂದು ಪಟ್ಟಿಗೆ ಸೇರಿಸುವ ವ್ಯವಸ್ಥೆ ಮಾಡಿ ತೋಟದ ಬದಿಯ ಹಾಡಿಯಿಂದ ತಂದ ಎರಡು ಭದ್ರವಾದ ಗೂಟವನ್ನು ಸಮಾನಾಂತರದಲ್ಲಿ ಹೂಳಿ, ಅದರ ಮೇಲಿಂದ ಎರಡು ಮರದ ರೀಪುಗಳ ಜೋಡಣೆ ಮಾಡಿದರು. ರೀಪುಗಳ ಮೇಲೆ ಹುಲ್ಲನ್ನಿರಿಸಿ, ಕಬ್ಬಿಣದ ಪಟ್ಟಿಯಿಂದ ಮೇಲೆ ಕೆಳಗೆ ಅಲ್ಲಾಡಿಸಿದಾಗಲೆಲ್ಲ ಹುಲ್ಲು ಚೂರು ಚೂರಾಗುವುದು. ಒಂದು ತಾಸಿಗೆ 150 ಕೆ.ಜಿ. ಹುಲ್ಲನ್ನು ಈ ಸಾಧನದಿಂದ ಕತ್ತರಿಸಬಹುದು. ಈ ಯಂತ್ರ ಬಳಸಿ ಹಸಿರು ಹುಲ್ಲು, ಒಣ ಹುಲ್ಲು, ಅಡಿಕೆ ಹಾಳೆ, ಅಡಿಕೆ ಸೋಗೆ, ಮುಂತಾದವನ್ನು ಸಣ್ಣದಾಗಿ ಕತ್ತರಿಸಲು ರಾಮಚಂದ್ರಯ್ಯ ಬಳಸುತ್ತಿದ್ದಾರೆ. ಅಲ್ಲದೇ ಮೃದುಜಾತಿಯ ಮರಗಳ ಹೆಬ್ಬೆರಳು ಗಾತ್ರದ ಗೆಲ್ಲು, ತೆಂಗಿನ ಗರಿ, ಕಳೆಗಿಡ ಮುಂತಾದವುಗಳನ್ನು ಕತ್ತರಿಸಿ ಕಾಂಪೋಸ್ಟ್ ಗೊಬ್ಬರಕ್ಕೆ ಬಳಸುತ್ತಿದ್ದಾರೆ. ಹೆಂಗಸರೂ ಕೂಡ ಸುಲಭವಾಗಿ ಬಳಸಬಹುದಾದ ಈ ಸರಳ ಯಂತ್ರದ ವೆಚ್ಚರೂ. 100-125 ಮಾತ್ರ. ಗಟ್ಟಿಹುಲ್ಲನ್ನು ಕೊಚ್ಚುವಲ್ಲಿ ಆಗುವ ಆಯಾಸ, ಮೊಣಕೈಯ ನೋವು, ಗಾಯಗಳಂತಹ ಸಮಸ್ಯೆಗಳು ಈ ಯಂತ್ರದಲ್ಲಿಲ್ಲ.

ಸಿಮೆಂಟು : ಜೇನು ಪೆಟ್ಟಿಗೆ

ಜೇನು ಕೃಷಿಯಲ್ಲಿ ಮರಗಳಿಂದ ಮಾಡಿದ ಜೇನುಪೆಟ್ಟಿಗೆಗೆ ಬದಲಾಗಿ ಸಿಮೆಂಟ್‌ನಿಂದ ಮಾಡಿದ ಪೆಟ್ಟಿಗೆಗಳನ್ನು ಕಳೆದ 4 ವರ್ಷಗಳಿಂದ ಬಳಸುತ್ತಿದ್ದಾರೆ, ಕೃಷಿಕ ರವಿಶಂಕರ (ಅಲ್ಲೂರ ಮನೆ, ಮಡಂತ್ಯಾರ, ಬೆಳ್ತಂಗಡಿ). ಕಡಿಮೆ ಖರ್ಚಿನ ಬಹುಕಾಲ ಬಾಳಬಹುದಾದ ಈ ಪ್ರಯೋಗವು ಕಟ್ಟಿಗೆಯಿಂದ ಮಾಡಿದ ಜೇನು ಪೆಟ್ಟಿಗೆಯಷ್ಟೇ ಪರಿಣಾಮಕಾರಿಯಗಿದ್ದು ಗೆದ್ದಲು ಮತ್ತು ಹವಾಮಾನ ವ್ಯತ್ಯಾಸಗಳನ್ನು ಸಹಿಸುಕೊಳ್ಳುತ್ತದೆ ಎಂಬುದಾಗಿ ಬೆಂಗಳೂರು ಕೃಷಿ ವಿಶ್ವ ವಿದ್ಯಾಲಯ ತಜ್ಞರು ದೃಢಪಡಿಸಿರುವರು ಎಂದು ರವಿಶಂಕರ್ ತಿಳಿಸಿರುತ್ತಾರೆ.

ಅನುಪಯುಕ್ತ ಡ್ರಿಪ್ ಪೈಪಿನಿಂದ ಅಡಿಕೆ ಒಣಗಿಸುವ ಚಾಪೆ

ಮಲೆನಾಡಿನ ಮನೆ ಮನೆಗಳಲ್ಲಿ, ಗದ್ದೆ-ತೋಟಗಳಲ್ಲಿ ಬಿದಿರಿನ ಪಾತ್ರ ಪ್ರಮುಖವಾದದ್ದು. ಆದರೆ ಈ ಪ್ರದೇಶಗಳಲ್ಲಿ ಈಗ ಬಿದಿರಿನ ಲಭ್ಯತೆ ಕೊರತೆಯಲ್ಲಿರುವುದರಿಂದ ಅನೇಕ ಕೃಷಿಕೆಲಸಗಳನ್ನು ನಿರ್ವಹಿಸಲು ತೊಂದರೆಯಾಗುತ್ತಿದೆ. ಅಡಿಕೆ ಬೆಳೆಗಾರರಿಗೂ ಈ ಸಮಸ್ಯೆ ಬಂದಿದ್ದು ಅಡಿಕೆ ತಟ್ಟೆ (ಚಾಪೆ) ತಯಾರಿಸಲು ಬಿದಿರಿಗೆ ಪರ್ಯಾಯವಾಗಿ ಕಬ್ಬಿಣ, ಗೋಣಿಚೀಲ, ಪ್ಲಾಸ್ಟಿಕ್-ಚೀಲಗಳನ್ನು ಬಳಸುತ್ತಿದ್ದರೂ ಬಿದಿರಿನಿಂದ ಮಾಡಿದ ತಟ್ಟೆ (ಚಾಪೆ)ಯಷ್ಟು ಅನುಕೂಲಕರವಾಗಿಲ್ಲ. ಭಾರ, ತುಕ್ಕು ಹಿಡಿಯುವದು, ದುಬಾರಿ ಬೆಲೆ-ಕಬ್ಬಿಣದ ಜಾಲರಿಗಾದರೆ, ಪ್ಲಾಸ್ಟಿಕ್ ಹಾಳೆಗಳಲ್ಲಿ ಬೆವರುವದು, ಗೋಣಿ ಚೀಲದಲ್ಲಿ ಅಂಟುವದು, ಅಡಿಕೆ ಒಣಗಿಸುವವರಿಗೆ ಅನೇಕ ಸಮಸ್ಯೆಗಳನ್ನು ಸೃಷ್ಟಿಸಿದೆ. ಇಂತಹ ಅನೇಕ ಪರ್ಯಾಯ ಬಳಕೆಗಳಲ್ಲಿ ತೀರ್ಥಹಳ್ಳಿ ತಾಲ್ಲೂಕಿನ ಹೊಸನಗರದ ಅರುಣಕುಮಾರರ ಅನುಪಯುಕ್ತ "ಡ್ರಿಪ್ ಕೊಳವೆಯಿಂದ ಮಾಡಿದ ಅಡಿಕೆ ಚಾಪೆ" ಬಿದಿರಿನ ಚಾಪೆಗಿಂತ ಉತ್ತಮ ಎಂಬಂತಿದೆ. ಅನುಪಯುಕ್ತ ಡ್ರಿಪ್ ಕೊಳವೆಗಳನ್ನು (ಎಲ್.ಎಲ್.ಡಿ.ಪಿ ಕೊಳವೆ) ಸಮವಾಗಿ ನಾಲ್ಕು ಭಾಗಗಳಲ್ಲಿ (ಅಗತ್ಯ ಅಳತೆ)ಸೀಳಿ ಹೆಣಿಕೆ ಮಾಡಿದ ತಟ್ಟೆ ಅಡಿಕೆ ಒಣಗಿಸಲು ಸರಳವಾಗಿದೆ. ಈ ಚಾಪೆಯ ತಳದಲ್ಲಿರುವ ರಂಧ್ರಗಳು ಹವೆಯಾಡಲು ಸಹಕಾರಿಯಾಗಿದ್ದು ಬಿದಿರಿನ ಚಾಪೆಗಿಂತ ದೀರ್ಘಕಾಲ ಬಾಳಿಕೆ ಬರಬಹುದಾಗಿರುತ್ತದೆ.

ಸಸ್ಯಾಂತರಂಗ

ಲೇ: ಡಾ: ವಿರೂಪಾಕ್ಷ ಬಡಿಗೇರ, 2003, ಪು. vi+68, ಬೆಲೆ ರೂ.50, ಕಾಳಿಕಾ ಪ್ರಕಾಶನ, ಮಂಗಳೂರು

'ಸಾಂಬಾರಿನ ರಾಜ ಕಾಳು ಮೆಣಸು' ಸಸ್ಯದ ಪರಿಚಯದಿಂದ ಆರಂಭವಾಗಿ 'ಮುನಸಿನ ಮೆಣಸಿನಕಾಯಿ' ಸಸ್ಯದ ಪರಿಚಯದೊಂದಿಗೆ ಕೊನೆಗೊಳ್ಳುವ ಒಟ್ಟು ಇಂತಹ ಇಪ್ಪತ್ತು ನಮ್ಮ ಸುತ್ತಮುತ್ತಲಿನ ದಿನನಿತ್ಯದ ಬಳಕೆಯ ಸಸ್ಯಗಳ ಔಷಧಿ ಗುಣಗಳನ್ನು ಪರಿಚಯಿಸುವ 'ಸಸ್ಯಾಂತರಂಗ' ವಿಜ್ಞಾನ ಸಾಹಿತ್ಯದ ಪುಸ್ತಕವಾಗಿದೆ.

ಲೇಖಕರಾದ ಡಾ. ವಿರೂಪಾಕ್ಷ ಬಡಿಗೇರರವರು ಮಂಗಳೂರು ಆಕಾಶವಾಣಿಯಲ್ಲಿ ಬಾನುಲಿ ಕೃಷಿ ಅಧಿಕಾರಿಯಾಗಿದ್ದು ತಮ್ಮ ಈ ಗ್ರಂಥದಲ್ಲಿ ಸಸ್ಯಗಳ ವೈಶಿಷ್ಟ್ಯತೆಗೆ ಅನುಗುಣವಾಗಿ ಕಾವ್ಯಮಯ ಶಿರೋನಾಮೆಯಡಿಯಲ್ಲಿ ಸಸ್ಯಗಳ ಐತಿಹಾಸಿಕ ಹಿನ್ನೆಲೆ, ಸಾಂಸ್ಕೃತಿಕ ಹಾಗು ವಾಣಿಜ್ಯ ಮಹತ್ವ, ಸಸ್ಯಕ್ಕಿರುವ ವಿವಿಧ ನಾಮಧೇಯ, ಸ್ಥಳೀಯವಾಗಿ ರೂಢಿಯಲ್ಲಿರುವ ಹೆಸರು, ಅನ್ಯಭಾಷೆಯಲ್ಲಿ ಬಳಸುವ ಹೆಸರು, ವೈಜ್ಞಾನಿಕ ಹೆಸರು, ಸಸ್ಯ ಪ್ರಬೇಧ, ರಾಸಾಯನಿಕ ಗುಣ, ಖನಿಜಾಂಶಗಳು, ಸಸ್ಯ ಬೆಳೆಯುವ ಪ್ರದೇಶಗಳು, ಬೆಳೆಯುವ ವಾತಾವರಣ, ತಳಿಗಳ ಭೌತಿಕ ಲಕ್ಷಣ, ಸಸ್ಯದ ವಿವಿಧ ಭಾಗಗಳನ್ನು ಚುಟುಕಾಗಿ ತಿಳಿಸಿದ್ದಾರೆ.

ಆಧುನಿಕ / ಪಾಶ್ಚಾತ್ಯ ವೈದ್ಯ ಪದ್ಧತಿ ಅಡ್ಡ ಪರಿಣಾಮದ ಜೊತೆಗೆ ದುಬಾರಿಯಾಗಿದ್ದು ದೇಶೀಯ ವೈದ್ಯ ಪದ್ಧತಿಗಳನ್ನು ಪುನರುಜ್ಜೀವನಗೊಳಿಸಿ ನಮ್ಮ ಸಸ್ಯ ಜೀವವೈವಿಧ್ಯ ಹಾಗು ಹಿತ್ತಲಗಿಡಗಳ ಔಷಧಿ ಗುಣ ವೈಶಿಷ್ಟ್ಯತೆ ಮತ್ತು ವೈದ್ಯಕೀಯ ಮಹತ್ವದ ಅರಿವು, ಆಸಕ್ತಿಯನ್ನು ಜನರಿಗೆ ಮೂಡಿಸುವ ಕಾರ್ಯ ತ್ವರಿತವಾಗಬೇಕಾಗಿದ್ದು ಈ ನಿಟ್ಟಿನಲ್ಲಿ ಅಗತ್ಯ ಮಾಹಿತಿಯನ್ನು ಒಳಗೊಂಡಿರುವ ಈ ಪುಸ್ತಕ ಉಪಯುಕ್ತವಾದುದಾಗಿದೆ.

ಸಸ್ಯಾಂತರಂಗದಲ್ಲಿ ವಿವರಿಸಿದ ಕೆಲ ಸಸ್ಯಗಳ ಬಳಕೆಯ ವಿಧಾನವನ್ನು ಈ ಕೆಳಗೆ ಸಂಕ್ಷಿಪ್ತದಲ್ಲಿ ಕೊಡಲಾಗಿದೆ.

ಪುದಿನ: ಉತ್ತಮ ಪಾಚಕವಾಗಿದ್ದು, ಅಜೀರ್ಣ, ವಾಯುವಿನಿಂದ ಬಳಲುವವರು 5-6 ಪುದಿನ ಎಲೆಗಳನ್ನು ಊಟಕ್ಕೆ ಮುಂಚಿತವಾಗಿ ತಿನ್ನುವುದರಿಂದ ಆಹಾರವು ಚೆನ್ನಾಗಿ ಪಚನವಾಗುವದು ಮತ್ತು ಹಸಿವನ್ನು ಹೆಚ್ಚಿಸುತ್ತದೆ.

ಅರಿಶಿನ: ಶೀತದಿಂದ ಮೂಗು ಕಟ್ಟಿದಾಗ, ಗಂಟಲು, ಕಿವಿ, ಮೂಗುಗಳಲ್ಲಿ ಸೋಂಕು ಇಲ್ಲವೇ ಉರಿತವಾದಾಗ ಅರಿಶಿನ ಬೆರೆಸಿದ ಹಾಲು, ಕಷಾಯವನ್ನು ಸೇವಿಸಿ ಶಮನ ಮಾಡಿಕೊಳ್ಳಬಹುದು.

ದಾಳಿಂಬೆ: ಅಂಗೈ ಇಲ್ಲವೇ ಅಂಗಾಲುಗಳಲ್ಲಿ ಉರಿಯು ಆಗುತ್ತಿದ್ದರೆ ದಾಳಿಂಬೆ ಎಲೆಗಳನ್ನು ಹಾಲಿನಲ್ಲಿ ನುಣ್ಣಗೆ ಅರೆದು ಲೇಪಿಸುವುದರಿಂದ ಉರಿ ಶಮನವಾಗುವದು.

ಕೊತ್ತಂಬರಿ: ಕೊತ್ತಂಬರಿಯನ್ನು ಕುದಿಸಿ ಹಾಲು ಮತ್ತು ಸಕ್ಕರೆಯ ಜೊತೆಯಲ್ಲಿ ಬೆರೆಸಿ ಮೂಲವ್ಯಾಧಿಯಿಂದ ಉಂಟಾಗುವ ರಕ್ತ ಸ್ರಾವ ತಡೆಗಟ್ಟಲು ಬಳಸಬಹುದು.

ಬೆಳ್ಳುಳ್ಳಿ: ಕೋಳಿಗಳಿಗೆ ಕೊಕ್ಕರೆ ರೋಗ ಬಂದಾಗ ಬೆಳ್ಳುಳ್ಳಿಯನ್ನು ಬೇಯಿಸಿ ಸಣ್ಣ ಸಣ್ಣ ತುಂಡುಗಳನ್ನಾಗಿ ತಿನ್ನಿಸಿದರೆ ಸಮಸ್ಯೆ ಪರಿಹಾರವಾಗುವುದು.

ಮೆಂತ್ಯೆ: ಮೆಂತ್ಯೆ ಕಾಳು ಹುರಿದು ಪುಡಿ ಮಾಡಿ ದಿನಕ್ಕೆ ನಾಲ್ಕು ಸಲ ಗಂಜಿಯೊಂದಿಗೆ ಸಕ್ಕರೆ ಹಾಕಿ ಸೇವಿಸಿದಲ್ಲಿ ತಾಯಂದಿರಲ್ಲಿ ಎದೆ ಹಾಲಿನ ಉತ್ಪಾದನೆ ಹೆಚ್ಚಾಗುತ್ತದೆ.

ಆಧಾರ: ಸಸ್ಯಾಂತರಂಗ, ಡಾ. ವಿರೂಪಾಕ್ಷ ಬಡಿಗೇರ, 2003

ಗಂಜಲದ ಗಮ್ಮತ್ತು

ಅಸ್ತಮಾ/ವಾಯುದಮ್ಮಿನ ಸಮಸ್ಯೆ ಇರುವವರು ದೇಶಿ ತಳಿಯ ನಾಟಿ ದನದ 50 ಮಿ.ಲೀ. ಗಂಜಲ (ಮೂತ್ರ) ವನ್ನು ಸಮ ಪ್ರಮಾಣದ ನೀರಿನೊಂದಿಗೆ ಪ್ರತಿ ದಿನ ಬೆಳಿಗ್ಗೆಯೇ ಖಾಲಿ ಹೊಟ್ಟೆಗೆ 48 ದಿನಗಳ ಕಾಲ ಸತತವಾಗಿ ಸೇವಿಸುವುದರಿಂದ ಈ ಸಮಸ್ಯೆ ನಿವಾರಣೆಯಾಗುತ್ತದೆ ಎಂಬುದು ಹಾಸನ ಜಿಲ್ಲೆಯ ಬೇಲೂರು ತಾಲ್ಲೂಕಿನ ಹಗರೆ ಗ್ರಾಮದ ರಾಜಣ್ಣನವರ ಅನುಭವ, ಹಾಗು ಸುತ್ತ ಮುತ್ತಲ ಜನರ ಅಭಿಪ್ರಾಯ.

ಸಂಗ್ರಹ: ಸಿದ್ಧರಾಮೇಗೌಡ

ವಿಶೇಷ ಸೂಚನೆ

ಹಿತ್ತಲಗಿಡದಲ್ಲಿ ದಾಖಲಿಸಿರುವ ವಿವಿಧ ಮಾಹಿತಿಗಳನ್ನು ಸಂಶೋಧನೆ, ವಾಣಿಜ್ಯ ಮತ್ತಾವುದೇ ದೃಷ್ಟಿಯಿಂದ ಬಳಸಬಯಸುವವರು ಮೊದಲು ಹಿತ್ತಲಗಿಡದ ಅನುಮತಿ ಪಡೆಯತಕ್ಕದ್ದು.

ರೈತರು ಮೊದಲು ಮಾಹಿತಿಗಳನ್ನು ನೀಡಿರುವ ಅಥವಾ ಸೃಷ್ಟಿಸಿರುವ ವ್ಯಕ್ತಿಗಳು, ಆ ಪ್ರದೇಶದೊಡನೆ ಸಂಪರ್ಕ ಏರ್ಪಡಿಸಿ, ಸಂಪೂರ್ಣ ವಿವರಗಳನ್ನು ಪಡೆಯುವುದು ಸೂಕ್ತ. ನಂತರ ತಮ್ಮ ಅನುಭವಗಳನ್ನು ಹಿತ್ತಲಗಿಡದೊಡನೆ ಹಂಚಿಕೊಳ್ಳಬೇಕಾಗಿ ಕೋರಲಾಗಿದೆ.

ಈ ಬಗ್ಗೆ ಆಗುವ ಯಾವುದೇ ನಷ್ಟ, ಅನಾಹುತಗಳಿಗೆ ಹಿತ್ತಲಗಿಡ ಜವಾಬ್ದಾರಿಯಲ್ಲ.

- ಸಂಪಾದಕ

ಹಿತ್ತಲಗಿಡದ ಇದುವರೆಗಿನ ಬಹುತೇಕ ಹಳೆ ಸಂಚಿಕೆಗಳು ಲಭ್ಯವಿರುತ್ತವೆ. ರೂ. 600/- ಪಾವತಿ ಮಾಡಿ ಪಡೆದುಕೊಳ್ಳಬಹುದು. ಆಸಕ್ತರು ಮನಿ ಆರ್ಡರ್ ಅಥವಾ ಡಿ.ಡಿ. ಕಳಿಸಿ. ಅಂಚೆ ವೆಚ್ಚ ಉಚಿತ.

ನೀರಿದ್ದರೆ ನಾವು ಮತ್ತು ಮಳೆ ನೀರು ಕೊಯ್ಲು

ಲೇ: ನಾಗೇಶ್ ಹೆಗಡೆ, ವಿಶ್ವನಾಥ, ತುಕಾರಾಮ್.ಎಸ್, ಶ್ರೀ ಪಡ್ರೆ, ರಾಜು ಬಿ. 1999, ಪ್ರ: ಗ್ರಾಮಾಂತರ ಸಮುದಾಯ ವಿಜ್ಞಾನ ಕೇಂದ್ರ (ರಿ), ಶೆಡ್ತಿಕೆರೆ, ವರದಾಮೂಲ-577417, ಸಾಗರ, ಶಿವಮೊಗ್ಗ ಪು 64, ಬೆಲೆ ರೂ.15



ಈ ಪುಸ್ತಕವು ವಿಶೇಷವಾಗಿ ನೀರಿನ ಶುದ್ಧತೆ, ಸಂರಕ್ಷಣೆ ಮತ್ತು ಮಳೆ ನೀರು ಕೊಯ್ಲು ಕುರಿತು ಮಾಹಿತಿಯನ್ನು ನೀಡುತ್ತದೆ. ಪುಸ್ತಕವು ಸಂಕ್ಷಿಪ್ತದಲ್ಲಿ ಸರಳವಾಗಿ ನೀರಿನ ಮಹತ್ವ, ಜಲ ಪ್ರದೋಷಣೆಯ ವಿಧಗಳು ಮತ್ತು ಕಾರಣಗಳನ್ನು ಚರ್ಚಿಸುತ್ತದೆ. ಜೊತೆಗೆ ಸರಳ ಉಪಾಯಗಳನ್ನು ಸೂಚಿಸುತ್ತದೆ. ಪ್ರಮುಖ ಅಧ್ಯಾಯವಾದ "ಮೇಲ್ಛಾವಣಿ ಮಳೆ ನೀರು ಶೇಖರಣೆ" ಉತ್ತಮವಾಗಿ ಮೂಡಿ ಬಂದಿದ್ದು ಜಲಕೊಯ್ಲಿನ ವಿಧಾನಗಳನ್ನು ಚಿತ್ರ ಸಮೇತ ವಿವರಿಸುತ್ತದೆ. ಮುಂದುವರಿದು ಇಂಗು ಗುಂಡಿಗಳು ನೀರಿನ ಸಮಸ್ಯೆ ಪರಿಹರಿಸುವಲ್ಲಿ ವಹಿಸುವ ಪಾತ್ರವನ್ನು ತಿಳಿಸುತ್ತದೆ. ನೀರು ಹಾಗೂ ನೈರ್ಮಲ್ಯದಿಂದ ಆರೋಗ್ಯ ಮತ್ತು ಸಂತಸವನ್ನು ಹಾಗೂ ಅಂತರ್ಜಲವನ್ನು ಹೆಚ್ಚಿಸುವಲ್ಲಿ ಜನರು ಸಕ್ರಿಯವಾಗಿ ತೊಡಗಿಸಿಕೊಳ್ಳುವಂತೆ ಮಾಹಿತಿ ನೀಡುವ ಪುಸ್ತಕ ಇದಾಗಿದ್ದು, ಗ್ರಾಮೀಣ ಪ್ರದೇಶದ ರೈತರು ವಿಶೇಷವಾಗಿ ಇದರ ಲಾಭ ಪಡೆಯಬಹುದಾಗಿರುತ್ತದೆ.

ನೆಲ-ಜಲ-ಜನ ನೀರು ಕಾಮಗಾರಿ ಸಂಚಯ

ಲೇ: ಅಯ್ಯಪ್ಪ ಮಸಗಿ, 2004, ಪು: 128+4, ಬೆಲೆ: ರೂ.60, ಪ್ರ: ಜಲ-ಸಿರಿ ಪ್ರಕಾಶನ, ಬೆಂಗಳೂರು

ಒಟ್ಟಾರೆ 21 ಲೇಖನಗಳನ್ನು ಒಳಗೊಂಡಿರುವ ಈ ಪುಸ್ತಕದಲ್ಲಿ ಲೇಖಕರು ನೀರು ಇಂಗಿಸುವ, ಉಳಿಸುವ, ಬೆಳೆಸುವ, ಸಮರ್ಥವಾಗಿ ಬಳಸುವ ಹಾಗು ಸ್ವಾವಲಂಬಿ ಕೃಷಿಯ ಅಗತ್ಯತೆ ಮತ್ತು ಅರಿವಿನ ಕುರಿತ ತಮ್ಮ ವಿಚಾರಾನುಭವಗಳನ್ನು ತಮ್ಮ ಮಾತಿನಲ್ಲೇ ಓದುಗರ ಮುಂದಿಟ್ಟಿದ್ದಾರೆ. ಈ ಪುಸ್ತಕದಲ್ಲಿ ಬರುವ "ಮಣ್ಣಿನಾಳಕ್ಕೆ ಇಳಿದಂತೆ", 'ನೀರು ಕಾಮಗಾರಿ ಪ್ರಯೋಗಗಳು' ಎಂಬ ಲೇಖನಗಳಲ್ಲಿ ಜಲ ಕ್ಷಾಮದ ಕಾರಣಗಳನ್ನು ವಿವರಿಸುತ್ತಾ, ಕೆರೆಯ ನೀರು ಕೊಳವೆ ಬಾವಿ ಸೇರುವುದು ಹೇಗೆ? ಜಲ ಮರು ಪೂರಣದಲ್ಲಿ ಕೆರೆಗಳ ಮಹತ್ವ, ಚಾವಣಿ ನೀರು ಸಂಗ್ರಹ, ಬತ್ತಿದ ಕೆರೆಯಲ್ಲಿ ಮಳೆ ನೀರು ಬಿತ್ತಿ(!), ಲೇಖನಗಳಲ್ಲಿ ತಮ್ಮ ಕಾರ್ಯಜ್ಞಾನಾನುಭವಗಳನ್ನು ವಿಶ್ಲೇಷಿಸಿದ್ದಾರೆ. ಡಾ. ರಾಜೇಂದ್ರಸಿಂಗ್, "ಜಲವೇದದ ರುವಾರಿ", ಲೇಖನದಲ್ಲಿ ಜಲಸಂರಕ್ಷಣೆಗಾಗಿ ಜೀವನ ಮುಡುಪಿಟ್ಟಿರುವ ರಾಜೇಂದ್ರಸಿಂಗ್‌ರವರ ವ್ಯಕ್ತಿ ಚಿತ್ರಣ ಸಾಧನೆಗಳನ್ನು ಮುಂದಿಟ್ಟಿದ್ದಾರೆ. 'ರೈತರ ಆತ್ಮಹತ್ಯೆಯ ವಿಮರ್ಶೆ, ಆತ್ಮಹತ್ಯೆ ತಡೆಗೆ ಇಲ್ಲಿದೇ ಮಾರ್ಗ, ಕೃಷಿ ಸ್ವಾವಲಂಬನೆ ಹೇಗೆ?', ಎಂಬ ಲೇಖನಗಳಲ್ಲಿ ಸ್ವಾವಲಂಬಿ ಕೃಷಿಯ ಪ್ರಸಕ್ತತೆ ವಿವರಿಸಿದ್ದಾರೆ. ಮಣ್ಣು ತಡೆಯುವ ಒಡ್ಡು-ಒಳಗಳ್ಳ ಎಂಬ ಲೇಖನದಲ್ಲಿ ದೇಶೀಯ ಜನರ ಜಾಣ್ಮೆಯನ್ನು ಪರಿಚಯಿಸಿದ್ದಾರೆ. ಸೂಕ್ತ ಜಲಕೊಯ್ಲಿನ ಕುರಿತಾದ ಭಾವ ಚಿತ್ರಗಳು ಮಾದರಿ ಚಿತ್ರಗಳು, ಅಂಕಿ ಅಂಶಗಳು, ನುಡಿಗಟ್ಟುಗಳು, ಕವನ, ಚುಟುಕುಗಳು, ಚಿಂತನೆ, ಸ್ವಾರಸ್ಯಕರ ಸಂಗತಿಗಳನ್ನು ಮುದ್ರಿಸಿದ್ದು ಕೃಷಿ ಮತ್ತು ಜಲ ಸಂರಕ್ಷಣೆ ನಿಟ್ಟಿನಲ್ಲಿ ಕೆಲಸ ಮಾಡುತ್ತಿರುವವರ ಉಪಯುಕ್ತ ವಿಳಾಸಗಳಿವೆ (ವಿ.ಸೂ.: ರೈತರಿಗೆ ರೂ. 40ಕ್ಕೆ ಈ ಪುಸ್ತಕ ಲಭ್ಯ).

ಅಭಿವರ್ಧಿತ ಸಾವಯವ ಗೊಬ್ಬರ - ವೈಜ್ಞಾನಿಕ ಕೃಷಿಗೆ ಅತ್ಯಗತ್ಯ

ಲೇ: ಕೆ.ಎಂ. ರಂಗಪ್ಪ 2004 ಪು. 121, ಬೆಲೆ ರೂ.150

ಶ್ರೀ ಕೆ.ಎಂ. ರಂಗಪ್ಪನವರು ಬರಿದೇ ಎಸ್.ಎಸ್.ಎಲ್.ಸಿ.ವರೆಗೆ ಓದಿದ್ದು 1973ರಿಂದ ಬೆಂಗಳೂರಿನ ಕೃಷಿ ವಿಶ್ವವಿದ್ಯಾನಿಲಯದಲ್ಲಿ ಕ್ಷೇತ್ರ ಸಹಾಯಕರಾಗಿ, ತಳಿ ಅಭಿವೃದ್ಧಿ ಹಾಗು ಸಂಶೋಧನಾ ಕೇಂದ್ರಗಳಲ್ಲಿ ಮೇವು ಅಭಿವೃದ್ಧಿ ಮುಂತಾದ ವಿಷಯಗಳಲ್ಲಿ ಪ್ರಾತ್ಯಕ್ಷಿಕ ಪರಿಣಿತಿ ಹೊಂದಿದ್ದು ಸಾವಯವ ಕೃಷಿಯಲ್ಲಿ ವಿಶೇಷ ಆಸಕ್ತಿಯನ್ನು ಬೆಳೆಸಿಕೊಂಡಿದ್ದಾರೆ. ತಮ್ಮ ಒಟ್ಟು ಅನುಭವವನ್ನು ಪರಿಣಿತ ವಿಜ್ಞಾನಿಗಳೂ ಮೆಚ್ಚುವಂತೆ ಈ ಪುಸ್ತಕದ ಮೂಲಕ ಹೊರ ತಂದಿರುತ್ತಾರೆ. ಲೇಖಕರು ಈ ಪುಸ್ತಕದಲ್ಲಿ ವೈಜ್ಞಾನಿಕ ಅಂಶಗಳ ಜೊತೆ ಹೆಚ್ಚಾಗಿ ಸಾಮಾನ್ಯವಾಗಿ ರೈತರು ಅನುಸರಿಸುತ್ತಿರುವ ಹಲವಾರು ಕೃಷಿ ಪದ್ಧತಿಗಳ ಸಾರವನ್ನು ವಿವರಿಸಿದ್ದಾರೆ.

ಜೊತೆಗೆ, ರೈತರು ನೈಸರ್ಗಿಕವಾಗಿ ಲಭ್ಯವಾಗುವ ಕೆರೆ, ಕುಂಟೆಗಳ ಮೇಲ್ಪದರದ ನಾಲ್ಕರಿಂದ ಆರು ಅಂಗುಲದ ಮಣ್ಣನ್ನು ಹೊಲ-ಗದ್ದೆಗಳಲ್ಲಿ ರಾಶಿ ಮಾಡಿ, ಹಸಿರೆಲೆ ಸೇರಿಸಿ, ಎಲವೆ ಗೊಬ್ಬರ ಸೇರಿಸಿ ದನದ ಗಂಜಲ ಮತ್ತು ಸಗಣಿ ಬೆರೆಸಿ 45 ದಿನಗಳ ಹದ ಮಾಡಿ ಒಂದು ಸಲ ಮಿಶ್ರಣ ಮಾಡಿ ಬಣವೆ ಪದ್ಧತಿಯಲ್ಲಿ ಹಾಕಲು ಹೇಳುತ್ತಾರೆ. ಹೀಗೆ 75 ರಿಂದ 80 ದಿನಗಳಲ್ಲಿ ಎಲ್ಲಾ ಬೆಳೆಗಳಿಗೆ ಯೋಗ್ಯವಾದ ಸತ್ವಭರಿತ ಗೊಬ್ಬರ ತಯಾರಿಸಿಕೊಳ್ಳಬಹುದು ಎಂಬ ಸರಳ ವಿಧಾನಗಳನ್ನು ತಿಳಿಸಿರುತ್ತಾರೆ.

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯ ನೌಕರರ ಸಂಘ ಹಾಗೂ ಶಿಕ್ಷಕರ ಸಂಘಗಳ ಸಂಯುಕ್ತ ಆಶ್ರಯದಲ್ಲಿ ದಿನಾಂಕ 2.11.2004 ರಂದು ನಡೆದ ಸಮಾರಂಭದಲ್ಲಿ ಡಾ. ಎ.ಎಂ. ಕೃಷ್ಣಪ್ಪ (ನಿವೃತ್ತ ಕುಲಪತಿಗಳು) ಈ ಪುಸ್ತಕವನ್ನು ಬಿಡುಗಡೆಗೊಳಿಸಿದರು. ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಡಾ. ಜಿ.ಕೆ. ವೀರೇಶ್ ಮತ್ತೋರ್ವ ನಿವೃತ್ತ ಕುಲಪತಿಗಳು ಭಾಗವಹಿಸಿದ್ದರು. ಡಾ. ಎಂ.ಎನ್. ಶೀಲವಂತರ್, ಹಾಲಿ ಕುಲಪತಿಗಳು ಅಧ್ಯಕ್ಷತೆ ವಹಿಸಿದ್ದರು.

ದಿಟ್ಟ ಪರಿಸರವಾದಿ ಮಥಾಯಿಗೆ ನೋಬೆಲ್ ಗರಿ



ಹಸಿರು ಕ್ರಾಂತಿಯ ಮೂಲಕ ಸಮಾಜವನ್ನು ಅಭಿವೃದ್ಧಿ ಪಥದಲ್ಲಿ ನಡೆಸಲು ಸಾಧ್ಯ ಎಂಬುದನ್ನು ತೋರಿಸಿಕೊಟ್ಟ ದಿಟ್ಟ ಪರಿಸರವಾದಿ, ಕೀನ್ಯಾದ ಹಸಿರು ಕ್ರಾಂತಿಯ ಹರಿಕಾರಿಣಿ, ವಾಂಗಾಯಿ ಮಥಾಯಿಗೆ ಪ್ರಸಕ್ತ ಸಾಲಿನ ನೋಬೆಲ್ ಶಾಂತಿ ಪ್ರಶಸ್ತಿ ದೊರೆತಿದೆ. ಸದ್ಯ ಕೀನ್ಯಾದ ಪರಿಸರ ಖಾತೆ ಉಪಸಚಿವೆಯಾಗಿರುವ ಮಥಾಯಿ, ಪ್ರಕೃತಿ ಸಂಪತ್ತಿನ ವಿನಾಶದ ವಿರುದ್ಧ ದನಿ ಎತ್ತಿದ ಆಫ್ರಿಕಾದ ದಿಟ್ಟ ಮಹಿಳೆ. ಹಸಿರು ಕ್ರಾಂತಿಯ ಪ್ರಕ್ರಿಯೆಯಲ್ಲಿ ಕಾಯ, ವಾಚಾ, ಮನಸಾ ತೊಡಗಿಸಿಕೊಂಡು ಕೀನ್ಯಾದಲ್ಲಿ ಹಸಿರು ವೃದ್ಧಿಸಲು ಪ್ರಮುಖ ಪಾತ್ರ ವಹಿಸಿದ್ದರು.

ನೋಬೆಲ್ ಪುರಸ್ಕಾರ ಪಡೆದ ಮೊದಲ ಆಫ್ರಿಕನ್ ಮಹಿಳೆ ಎಂಬ ಗೌರವಕ್ಕೆ ಪಾತ್ರರಾಗಿರುವ ಮಥಾಯಿ ತಮ್ಮ ಮನೆ ಹಿಂದಿನ ಕೈ ತೋಟದಲ್ಲಿ ಮರಗಳನ್ನು ಬೆಳೆಸುವ ಮೂಲಕ ಪರಿಸರ ಹೋರಾಟಗಾರ್ತಿಯಾಗಿ ರೂಪುಗೊಂಡವರು. ಅರಣ್ಯನಾಶದಿಂದ ಉಂಟಾಗುವ ದುಷ್ಪರಿಣಾಮಗಳನ್ನು ತಡೆಯುವ ಉದ್ದೇಶದಿಂದ 1977ರಲ್ಲಿ ಸಂಘಟನೆಯೊಂದನ್ನು ಕಟ್ಟಿ ಹಸಿರು ಬೆಳೆಸುವ ಚಟುವಟಿಕೆಗೆ ಚಾಲನೆ ನೀಡಿದರು. ಹಾಗೆ, ಇವರು ಆಫ್ರಿಕಾದ ಬಡ ಮಹಿಳೆಯರನ್ನು ಸಂಘಟಿಸಿ 300 ಲಕ್ಷ ಮರಗಳನ್ನು ಬೆಳೆಸುವಲ್ಲಿ ಮಹತ್ವದ ಪಾತ್ರವಹಿಸಿದ್ದಾರೆ. ಪರಿಸರ ಸಂರಕ್ಷಣೆ ಕ್ಷೇತ್ರದಲ್ಲಿ ಸಾಧನೆ ಮಾಡಿದವರಿಗೆ ಇದೇ ಮೊದಲ ಬಾರಿಗೆ ಈ ಪ್ರಶಸ್ತಿ ಸಂದಿರುವುದು ಅತ್ಯಂತ ಮಹತ್ವದ್ದಾಗಿರುತ್ತದೆ.

ಕಾಯಕ ನಿಷ್ಠೆಯ ಕೃಷಿಕ ತಿಂಡ್ಲು ಕೃಷ್ಣಪ್ಪ

ದೇವನ ಹಳ್ಳಿ ತಾಲ್ಲೂಕಿನ ಜಾಲಿಗೆ ತಿಂಡ್ಲು ಗ್ರಾಮದ ಕೃಷ್ಣಪ್ಪ ಅತಿ ಸಣ್ಣ ರೈತ. ಸ್ವ ಅನುಭವ ಮತ್ತು ಕಾಯಕಷ್ಟ ದುಡಿಮೆಯ ಅವರ ಕೃಷಿ ಕಾರ್ಯ-ಕಾಯಕ ಸಂಸ್ಕೃತಿ ಮಾಯವಾಗುತ್ತಿರುವ ಈ ದಿನಗಳಲ್ಲಿ ಅತ್ಯಂತ ಮಹತ್ವದ್ದಾಗಿದ್ದು ಎಂತಹವರೂ ವಿಸ್ಮಯ ಪಡುವಂತಹದಾಗಿದೆ.

ಸ್ವಂತ ಭೂಮಿಯಿಲ್ಲದಿದ್ದ ಕೃಷ್ಣಪ್ಪನವರಿಗೆ ಸುಮಾರು ಹದಿನೆಂಟು ವರ್ಷಗಳ ಹಿಂದೆ ಸರ್ಕಾರದ ಯೋಜನೆಯೊಂದರಲ್ಲಿ ಪಡೆದ, ಒಂದು ಎಕರೆ ಇಪ್ಪತ್ತೇಳು ಗುಂಟೆ ಹೊಲವೇ ಇವರ ಕರ್ಮ ಭೂಮಿ ಆಗಿದೆ.

ಕೃಷ್ಣಪ್ಪರ ನೀರಿನಕಟ್ಟೆ: ಫಲವತ್ತಲ್ಲದ, ಹಾಸುಬಂಡೆ ಹಾಗೂ ತಗ್ಗು ದಿಣ್ಣೆಯಿಂದ ಕೂಡಿದ ತಮ್ಮ ಹೊಲದ ಒಂದು ಮೂಲೆಯಲ್ಲಿನ ಕೊರಕಲಿಗೆ ತಾವೊಬ್ಬರೇ ಒಂದೂವರೆ ತಿಂಗಳುಗಳ ಕಾಲ ಸತತ ಶ್ರಮದಾನ ಮಾಡಿ ಹತ್ತು ಅಡಿ ಉದ್ದ ಐದು ಅಡಿ ಎತ್ತರದ ಅಡ್ಡಗಟ್ಟೆ ಕಟ್ಟಿದ್ದಾರೆ. ಮಳೆಗಾಲದಲ್ಲಿ ಸಂಗ್ರಹವಾಗುವ ನೀರನ್ನು ಮಳೆ ಇಲ್ಲದ ಸಮಯದಲ್ಲಿ ತಾವು ಬೆಳೆದ ತರಕಾರಿ ಬೆಳೆಗೆ ನೀರುಣಿಸಲು ಬಳಸುತ್ತಾರೆ. ಇದರಲ್ಲಿ ಫೆಬ್ರವರಿ ತಿಂಗಳವರೆಗೆ ನೀರು ಇರುತ್ತದೆ ಎಂದು ಕೃಷ್ಣಪ್ಪ ಹೇಳುತ್ತಾರೆ. ಇವರ ಜಲಕೊಯ್ಲಿನ ಜ್ಞಾನ, ಜಲಸಂವರ್ಧನ ಯೋಜನೆಗಳನ್ನು ಯೋಚಿಸುವ ಸರ್ಕಾರ ಮತ್ತು ಸಂಸ್ಥೆಗೆ ಸೂಕ್ತ ಮಾದರಿಯಾಗಿದೆಯೆಂದರೆ ತಪ್ಪಾಗದು.

ಬಂಡೆಗಲ್ಲಿನಲ್ಲೂ ಹಾಗಲಕಾಯಿಯ ಬಂಪರ್ ಬೆಳೆ: ಹಿಂದಿನ ವರ್ಷ ತಮ್ಮ ಹೊಲದ ಬಂಡೆಗಲ್ಲಿನ ಒಡಕು ಸಂದಿಗಳಲ್ಲಿನ ಕಳೆ ತೆಗೆದ ಕೃಷ್ಣಪ್ಪ ಆ ಜಾಗದಲ್ಲಿ ಗೊಬ್ಬರ ಮಿಶ್ರಿತ ಮಣ್ಣು ತುಂಬಿ ಇನ್ನೂರೈವತ್ತು ಗುಳಿ ಮಾಡಿದರು. ಮುಂಗಾರಿನ ಮಳೆಯಲ್ಲಿ ಆ ಗುಳಿಗಳಲ್ಲಿ ಹಾಗಲಕಾಯಿ ಬೀಜ ಬಿತ್ತಿದರು. ಮಳೆ ಇಲ್ಲದಾಗ ತಮ್ಮ ಕಟ್ಟೆಯಿಂದ ತಂಬಿಗೆಯಲ್ಲಿ ನೀರು ಹೊತ್ತು ಗಿಡಗಳಿಗೆ ನೀರುಣಿಸಿದರು. ಬಳ್ಳಿ ಚೆನ್ನಾಗಿ ಬೆಳೆಯಲಾರಂಭಿಸಿದಾಗ ಬೇಲಿಗಿಡ ಕಡಿದು ತಂದು ಆಶ್ರಯ ನೀಡಿ ಸಮೃದ್ಧ ಫಸಲು ಪಡೆದರು. ಕೃಷ್ಣಪ್ಪ ಮಾರಾಟಕ್ಕಾಗಿ ಮೂಟೆಗಟ್ಟಲೆ ಹಾಗಲಕಾಯಿ ಹೊತ್ತೊಯ್ಯುತ್ತಿದ್ದುದನ್ನು ಕಂಡ ಊರಿನ ಜನ ಹುಬ್ಬೇರಿಸಿದ್ದೂ ಉಂಟು!.

ನಾಲ್ಕು ತಿಂಗಳಲ್ಲೇ ತಾವು ಬೆಳೆದ ಹಾಗಲಕಾಯಿ ಮಾರಾಟದಿಂದ ಹನ್ನೊಂದು ಸಾವಿರ ರೂಪಾಯಿ ಆದಾಯ ಪಡೆದೆನೆಂದು ಹೆಮ್ಮೆಯಿಂದ ಹೇಳುತ್ತಾರೆ. **"ಯಾವ ಭೂಮಿಯೂ ಬಂಜೆಯಲ್ಲ ನೆಲದ ಗುಣಧರ್ಮವರಿತು ಮಾಡಿದ ಕೃಷಿಯಲ್ಲಿ ಫಲ ಸಿಕ್ಕೇ ಸಿಗುತ್ತದೆ"** ಎನ್ನುವ ವಿಶ್ವಾಸ ಕೃಷ್ಣಪ್ಪನವರದು.

ಗೊಬ್ಬರ ಜ್ಞಾನ: ತಮ್ಮ ಹೊಲಕ್ಕೆ ಅತಿ ಕನಿಷ್ಟ ರಾಸಾಯನಿಕ ಗೊಬ್ಬರ ಬಳಸುತ್ತಿರುವ ಕೃಷ್ಣಪ್ಪ ತಮ್ಮ ಹೊಲಕ್ಕೆ ಅಗತ್ಯವಾದ ಗೊಬ್ಬರವನ್ನು ತಾವೇ ತಯಾರಿಸಿಕೊಳ್ಳುತ್ತಾರೆ.

ಬೇಸಿಗೆ ಕಾಲದಲ್ಲಿ ಹುತ್ತದ ಮಣ್ಣು, ಹೊಂಗೆ ಕಸ, ಗಿಡಗಳ ಬುಡದ ಮಣ್ಣನ್ನು ತಂದು ಕೂಡಿ ಹಾಕಿ, ಅದಕ್ಕೆ ಕ್ಷೌರದಂಗಡಿಯಿಂದ ತಂದ ಮಾನವಕೇಶ ಹಾಗೂ ದಿನನಿತ್ಯ ಹಕ್ಕಿ ತರುವ ದನಗಳ ಸಗಣಿಯನ್ನು ಒಟ್ಟುಗೂಡಿಸಿ ಕಳಿಯಲು ಬಿಟ್ಟು ತಮ್ಮದೇ ಆದ ಸಾವಯವ ಗೊಬ್ಬರ ತಯಾರಿಸಿಕೊಳ್ಳುತ್ತಾರೆ. ಈ ಎಲ್ಲಾ ಕಾರ್ಯಗಳಿಗೆ ಹಣ ಹಾಗೂ ತಮ್ಮ ಮಕ್ಕಳ ಸಹಾಯ ನೆಚ್ಚಿಕೊಳ್ಳದ ಕೃಷ್ಣಪ್ಪ ಹೆಚ್ಚು ಸಮಯವನ್ನು ತಮ್ಮ ಹೊಲದಲ್ಲೇ ಕಳೆಯುತ್ತೇನೆ ಎನ್ನುತ್ತಾರೆ.

ಸದ್ಯ ಮುಖ್ಯವಾಗಿ ರಾಗಿ ಬೆಳೆ ಬೆಳೆಯುವ ಕೃಷ್ಣಪ್ಪನವರು ತಮ್ಮ ಹೊಲದ ಹಾಸು ಬಂಡೆಯ ಮೇಲಿರುವ ಅಲ್ಪ ಸ್ವಲ್ಪ ಮಣ್ಣಿನಲ್ಲೆ ಮನೆಗೆ ಸಾಕಾಗುವಷ್ಟು ಅವರೆ, ಹುರುಳಿಕಾಯಿ, ಟೊಮೆಟೊ, ಮೆಣಸಿನಕಾಯಿ, ಅಲಸಂದೆಯನ್ನು ಮಳೆಗಾಲದಲ್ಲಿ ಬೆಳೆದುಕೊಳ್ಳುತ್ತೇನೆಂದು ಹೇಳುತ್ತಾರೆ.

ಊರಜನರ ಪ್ರೀತಿ ಸಹಕಾರವನ್ನು ಅಭಿಮಾನದಿಂದ ನೆನೆಯುವ ಕೃಷ್ಣಪ್ಪರ ಶ್ರಮಾಧಾರಿತ ಕೃಷಿಕಾರ್ಯ ಸುಸ್ಥಿರ ಕೃಷಿಗೆ ಉತ್ತಮ ಉದಾಹರಣೆಯಾಗಿದೆ.

ಲೇಖನ: ಜಿ. ಚಂದ್ರಶೇಖರ ಪ್ರಸಾದ್

ಕರ್ನಾಟಕ ಸರ್ಕಾರದ ಹೆಮ್ಮೆಯ ಸಾವಯವ ಕೃಷಿ ನೀತಿ

ಲೇಖಕ: ಪ್ರಹ್ಲಾದ್ ವಿ.ಸಿ.

ಹಸಿರು ಕ್ರಾಂತಿಯ ನಂತರದ ದಿನಗಳಲ್ಲಿ ಕೃಷಿ ಕ್ಷೇತ್ರದಲ್ಲಾದ ಅನಾಹುತ ತಪ್ಪಿಸುವ ಪ್ರಥಮ ಹೆಜ್ಜೆಯಾಗಿ, ಜನರ ಸ್ಪಂದನೆಗಳಿಗೆ ಓಗೊಟ್ಟು ಈಗಾಗಲೇ "ಸಾವಯವ ಕೃಷಿ ನೀತಿ"ಯನ್ನು ಕೆಲ ರಾಜ್ಯಗಳು ಘೋಷಿಸಿವೆ ಎಂಬ ವಿಷಯ ಸಮಾಧಾನಕರವಾದದ್ದು. ಇದೇ ಜಾಡಿನಲ್ಲಿ ಕರ್ನಾಟಕ ಸರ್ಕಾರವು "ರಾಜ್ಯ ಸಾವಯವ ಕೃಷಿ ನೀತಿ 2004"ನ್ನು ಇತ್ತೀಚೆಗೆ ಪ್ರಕಟಿಸಿದ್ದು ಕೃಷಿಯಲ್ಲಿ ರಾಸಾಯನಿಕಗಳ ಬಳಕೆಯ ಅನಾಹುತದ ಅಪಸ್ವರದ ಬದಲು ಜೈವಿಕ ವಿವಿಧತೆ ಮತ್ತು ನಿರಂತರ ಕೃಷಿಯ ಪರಸ್ಪರ ಕೊಂಡಿ ಬೆಸೆದು ಸೌಹಾರ್ದಪೂರ್ಣ 'ಸುಸ್ಥಿರ ಕೃಷಿ' ಸಾಗಲು ಅವಕಾಶ ಕಲ್ಪಿಸಬಹುದಾಗಿರುತ್ತದೆ. ನೆಲ-ಜಲ-ಜಾನುವಾರುಗಳ ಸಮರ್ಪಕ ಬಳಕೆ ಮತ್ತು ಆರೋಗ್ಯಪೂರ್ಣ ಪೋಷಕಾಂಶದ ಬಳಕೆಗೆ ಪ್ರೋತ್ಸಾಹ ದೊರೆಯಲಿದ್ದು ರಾಜ್ಯದ ರೈತಾಪಿ ವರ್ಗ ಸ್ವಾಭಿಮಾನ ಮತ್ತು ಸ್ವಾವಲಂಬನೆಯತ್ತ ಸಾಗಲು ಸಹಕಾರಿಯಾಗಿದೆ ಎಂಬ ಆಶಯವನ್ನು ಹೊಂದಿರುತ್ತದೆ. ಹಾಗೇ ಈ ನೀತಿಯು ರೈತರ ಆರ್ಥಿಕ ಹೊರೆ ತಗ್ಗಿಸುವ, ಮಣ್ಣಿನ ಉತ್ಪಾದನಾ ಸಾಮರ್ಥ್ಯ ಹೆಚ್ಚಿಸುವ, ಆಹಾರ ಭದ್ರತೆ ಒದಗಿಸುವ, ಗ್ರಾಮೀಣ ಉದ್ಯೋಗ ದೊರಕಿಸಿಕೊಡುವ, ಮುಂತಾದ ಉದ್ದೇಶಗಳನ್ನು ಹೊಂದಿದೆ.

ಈ ನೀತಿಯನ್ನು ಯಶಸ್ವಿಯಾಗಿ ಜಾರಿಗೊಳಿಸಲು ಸಮಗ್ರ ಕಾರ್ಯತಂತ್ರವನ್ನು ಸರ್ಕಾರ ವಿವಿಧ ಇಲಾಖೆಗಳಿಗೆ ಸೂಚಿಸಿದೆ. ಹೀಗಾಗಿ ಕೃಷಿ, ಶಿಕ್ಷಣ, ಅರಣ್ಯ, ತೋಟಗಾರಿಕೆ, ಮೀನುಗಾರಿಕೆ, ಗ್ರಾಮೀಣಾಭಿವೃದ್ಧಿ, ಕೈಗಾರಿಕಾ ಇಲಾಖೆಗಳು ಮತ್ತು ರಾಜ್ಯದ ಕೃಷಿ ವಿಶ್ವವಿದ್ಯಾನಿಲಯಗಳಿಗೆ ಹೆಚ್ಚಿನ ಜವಾಬ್ದಾರಿಗಳನ್ನು ವಹಿಸಿದೆ.

ಮಳೆಯಾಧಾರಿತ ಹಾಗೂ ಒಣಭೂಮಿ ಪ್ರದೇಶಗಳಲ್ಲಿ (drought prone) ವಿಶೇಷ ಕಾರ್ಯಯೋಜನೆಗಳ ಮುಖಾಂತರ ಕಾರ್ಯಕ್ರಮದ ಅನುಷ್ಠಾನವನ್ನು ಜಾರಿಗೊಳಿಸಬೇಕಾಗುತ್ತದೆ. ಜೀವವೈವಿಧ್ಯ ಸಂರಕ್ಷಣೆ ಮತ್ತು ಸದುಪಯೋಗಕ್ಕಾಗಿ ಕೃಷಿ-ತೋಟಗಾರಿಕೆ-ಅರಣ್ಯ- ಹುಲ್ಲುಗಾವಲು ಹಾಗೂ ಮೇವಿನ ಬೆಳೆಗಳನ್ನು ಪ್ರತಿ ಖಾಸಗಿ ಭೂಮಿಯಲ್ಲಿ ಬೆಳೆಯುವಂತೆ ಪ್ರೋತ್ಸಾಹಿಸಲಾಗುವದು. ಮಣ್ಣು-ನೀರಿನ ಸಂರಕ್ಷಣೆ, ಮಳೆನೀರು ಕೊಯ್ಲು, ಅಂತರ್ಜಲ ಹೆಚ್ಚಿಸುವ ಪ್ರಯತ್ನಗಳು, ಮಣ್ಣಿನ ಗುಣಮಟ್ಟ ವರ್ಧಿಸುವ ನಿಟ್ಟಿನಲ್ಲಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಈ ನೀತಿ ಸೂಚಿಸುತ್ತದೆ.

ಪರ್ಯಾಯ ಶಕ್ತಿಯ ಮೂಲಗಳ ಬಳಕೆಗೆ ಪ್ರೋತ್ಸಾಹ ನೀಡಲು ಜೈವಿಕ ಅನಿಲ ಘಟಕಗಳು, ಸೋಲಾರ್ ವಿದ್ಯುದ್ದೀಪಗಳ ಬಳಕೆ, ಗಾಳಿ ಶಕ್ತಿ ಬಳಕೆಗೆ ಅನುಕೂಲವನ್ನು ಕಲ್ಪಿಸಲಾಗುವುದು. ಸದ್ಯಕ್ಕೆ ಲಭ್ಯವಿರುವ ಮಾರುಕಟ್ಟೆ ವ್ಯವಸ್ಥೆಗಳಾದ ಸಫಲ್, ಎ.ಪಿ.ಎಂ.ಸಿ., ಹಾಪ್‌ಕಾಮ್ಸ್ ಮತ್ತು ರಾಜ್ಯ ಗ್ರಾಮೀಣ ಕೈಗಾರಿಕೆ ಮಂಡಳಿಗಳಿಗೆ ಸಾವಯವ ಕೃಷಿ ಮಾರುಕಟ್ಟೆಗೆಂದೇ ವಿಶೇಷ ವ್ಯವಸ್ಥೆಗಳನ್ನು ಕಲ್ಪಿಸಿಕೊಳ್ಳಲು ಅನುಕೂಲ ಒದಗಿಸಿ ಕೊಡಬಹುದಾಗಿರುತ್ತದೆ.

ಆರ್ಥಿಕ ಅನುಕೂಲತೆಯನ್ನು ಒದಗಿಸಲು ವಿನಾಯಿತಿ ಬಡ್ಡಿ ದರದಲ್ಲಿ ನಬಾರ್ಡ್‌ಮತ್ತು ರಾಷ್ಟ್ರೀಯ ಹಾಗು ಗ್ರಾಮೀಣ ಬ್ಯಾಂಕುಗಳು ರೈತರ ಸಹಾಯಕ್ಕೆ ಸಾಲ ಸೌಲಭ್ಯಗಳ ಅನುಕೂಲತೆಯನ್ನು ನೀಡಬಹುದಾಗಿರುತ್ತವೆ.

ಸಾವಯವ ಕೃಷಿ ಉತ್ಪನ್ನಗಳ ನಿರ್ಯಾತವನ್ನು ಪ್ರೋತ್ಸಾಹಿಸಲು ಅಂತಾರಾಷ್ಟ್ರೀಯ ಮಟ್ಟದಲ್ಲಿ ಉತ್ಪನ್ನಗಳ ಬೆಲೆ ಮತ್ತು ಮಾರುಕಟ್ಟೆ ಮಾಹಿತಿಯನ್ನು ನೀಡಿ ರೈತರಿಗೆ ನೆರವಾಗಬಹುದಾಗಿರುತ್ತದೆ. ಉತ್ಪನ್ನಗಳಲ್ಲಿ ಅಂತಾರಾಷ್ಟ್ರೀಯ ಗುಣ ಮಟ್ಟ ಕಾಯ್ದುಕೊಳ್ಳುವಲ್ಲಿ ಸಂಸ್ಕರಣೆ, ಪ್ಯಾಕಿಂಗ್ ಹಾಗು ಸಂಗ್ರಹಣೆಗೆ ಸೂಕ್ತ ಸೌಲಭ್ಯ ಕಲ್ಪಿಸಿಕೊಡಬಹುದಾಗಿರುತ್ತದೆ. ರಾಸಾಯನಿಕರಹಿತ ಉತ್ಪನ್ನಗಳ ಪರಿಶೀಲನೆಗೆ, ಕೀಟ ನಿಯಂತ್ರಣ, ತ್ಯಾಜ್ಯ / ಉಳಿಕೆ-ವಿಶ್ಲೇಷಣೆ ಪ್ರಯೋಗಾಲಯಗಳು ಅಂತಾರಾಷ್ಟ್ರೀಯ ಗುಣಮಟ್ಟದನುಗುಣವಾಗಿ ಕಾರ್ಯನಿರ್ವಹಿಸಲು ಈ ನೀತಿ ನೆರವಾಗಲಿದೆ.

ಸಂಶೋಧನೆ-ಅಭಿವೃದ್ಧಿ:

ಸಾವಯವ ಕೃಷಿಗೆ ಪೂರಕವಾಗುವಂತಹ ಸಮಗ್ರ ಸಂಶೋಧನೆಗಳನ್ನು ರಾಜ್ಯದ ಎರಡೂ ಕೃಷಿ ವಿಶ್ವವಿದ್ಯಾಲಯಗಳು ವಿವಿಧ ಕೃಷಿ ವಿದ್ಯಾ ಕೇಂದ್ರಗಳು ಹಮ್ಮಿಕೊಳ್ಳುವಂತೆ ಸೂಚಿಸಲಾಗುವದು. ರಾಜ್ಯದ ವಿವಿಧ ಕೃಷಿ ಪ್ರದೇಶಗಳಿಗನುಗುಣವಾಗಿ ಸಾವಯವ ಕೃಷಿ ಕೈಪಿಡಿ ರಚಿಸಲು ಸೂಚಿಸಲಾಗುವದು. ಇದಲ್ಲದೇ ರಾಜ್ಯದ ಎರಡೂ ಕೃ.ವಿ.ವಿ.ಗಳಲ್ಲಿ ಸ್ನಾತಕೋತ್ತರ ಪದವಿ ಮಟ್ಟದಲ್ಲಿ ಸಾವಯವ ಕೃಷಿ ಅಭ್ಯಾಸವನ್ನು ಪಠ್ಯಕ್ರಮದಲ್ಲಿ ಅಳವಡಿಸಲು ಸೂಚಿಸಿರುತ್ತದೆ.

ರಾಜ್ಯದಲ್ಲಿ ಸಾವಯವ ಕೃಷಿಯನ್ನು ವರ್ಧಿಸಲು ಸುಸಜ್ಜಿತ ಮತ್ತು ಸಶಕ್ತವಾದ ಉನ್ನತಮಟ್ಟದ ಸಮಿತಿಯೊಂದನ್ನು ರಚಿಸಲು ಸೂಚಿಸಲಾಗಿದ್ದು ಈ ನೀತಿಯ ಉಸ್ತುವಾರಿ ಮತ್ತು ಕಾರ್ಯಾನುಷ್ಠಾನದ ಹೊಣೆ ವಿಶೇಷ ಮುಖ್ಯಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿರುವುದು. ಈ ನೀತಿಯ ಅನುಷ್ಠಾನಕ್ಕೆ ಅವಶ್ಯವಾದ ಸಂಯೋಜನೆ, ಆಡಳಿತ ನಿರ್ವಹಣೆ, ಹಣಕಾಸಿನ ಅನುಕೂಲತೆಯನ್ನು ಉಳಿದ ಭಾಗೀದಾರರೊಂದಿಗೆ ನಿರ್ವಹಿಸಬೇಕಾಗುತ್ತದೆ. ಈ ಸಮಿತಿಯು ಸಾವಯವ ಕೃಷಿಗೆ ಪೂರಕವಾದ ವಿವಿಧ ಪ್ರಸ್ತಾವನೆಗಳನ್ನು ತಪಶೀಲಿಸುವ ಮತ್ತು ಅನುಮತಿ ನೀಡುವ ಮುನ್ನ ಸಾವಯವ ಕೃಷಿ ನೀತಿಯ ಸಲಹಾ ಮಂಡಳಿಯ ಸಲಹೆ ಪಡೆಯಬಹುದಾಗಿರುತ್ತದೆ.

ಯೋಜನೆಯ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಆಯಾ ಪ್ರದೇಶದ ರೈತ ಸಮೂಹ / ಸಂಘಟನೆಗಳು/ಸಹಕಾರಿ ಸಂಘ/ಸ್ವಸಹಾಯ ಮಂಡಳಿಗಳು/ ಸ್ವಯಂ ಸೇವಾ ಸಂಸ್ಥೆಗಳು ಉಚ್ಚಸಮಿತಿಯ ಪೂರ್ವಾನುಮತಿ ಪಡೆದು ಕಾರ್ಯ ಯೋಜನೆ ಮತ್ತು ಅನುಷ್ಠಾನ ನೀತಿಗಳನ್ನು ರಚಿಸಬೇಕಾಗುತ್ತದೆ. ಇಂತಹ ಸ್ಥಳೀಯ ಘಟಕಗಳು ಆ ಪ್ರದೇಶದಲ್ಲಿ ಸೂಕ್ತ ಯೋಜನೆಗಳ ಕುರಿತು ಕಿರು ಸಲಹಾ ಸಮಿತಿಗೆ ಶಿಫಾರಸ್ಸುಗಳನ್ನು ನೀಡಬಹುದಾಗಿರುತ್ತದೆ. ಈ ನೀತಿಯ ಅಂಗವಾಗಿ ಸಾವಯವ ಕೃಷಿ ಅನುಷ್ಠಾನ ಮತ್ತು ಪರಿವರ್ತನೆ ಕೆಲಸಗಳನ್ನು ರಾಜ್ಯ/ಜಿಲ್ಲಾ/ತಾಲುಕು ಮಟ್ಟದ ಕೃಷಿಕ ಸಮಾಜಗಳಿಗೆ ವಹಿಸಲಾಗುವುದು.

ರಾಜ್ಯಸರ್ಕಾರವು ವಿಶೇಷವಾಗಿ ಗುಣಮಟ್ಟದ ಸಾವಯವ/ಎರೆಹುಳ ಗೊಬ್ಬರ/ ಬೀಜ/ಬಿತ್ತನೆ ವಸ್ತುಗಳು ಹಾಗೂ ಬೆಳೆ ಸಂರಕ್ಷಣಾ ವಸ್ತುಗಳ ಉತ್ಪಾದನೆಗೆ

ಸ್ವಸಹಾಯ ಸಂಘಗಳಿಗೆ ಪ್ರೋತ್ಸಾಹ ನೀಡುವುದು. ಹಾಗೆಯೇ ಸ್ವಸಹಾಯ ಸಂಘಗಳು ಸ್ಥಳೀಯ ಬೀಜ ತಳಿಗಳ ಸಮುದಾಯ ಬೀಜ ಭಂಡಾರಗಳನ್ನು ನಿರ್ವಹಿಸಲು ಮುಂದಾಗುವಂತೆ ಉತ್ತೇಜನ ನೀಡಲಾಗುವದು.

ಸಾವಯವ ಕೃಷಿ ಅಭಿವರ್ಧನೆಗೆ ಅನುಕೂಲವಾಗುವಂತೆ "ರೈತ ಸಹಕಾರಿ ಸಂಘ/ ಸಂಸ್ಥೆಗಳಿಗೆ ಪ್ರೋತ್ಸಾಹ ನೀಡಲಾಗುವದು. ವಿಶೇಷವಾಗಿ ಸಣ್ಣ ಮತ್ತು ಅತಿ ಸಣ್ಣ ರೈತರನ್ನು ಸದಸ್ಯರನ್ನಾಗಿ ಹೊಂದಿರುವ ಇಂತಹ ಸಹಕಾರಿ ಘಟಕಗಳು ರೈತರಿಂದ ರೈತರಿಗಾಗಿ – ಮಾರುಕಟ್ಟೆ ಮತ್ತು ವ್ಯವಹಾರದ ವೇದಿಕೆಯಾಗಿ ಕೆಲಸ ನಿರ್ವಹಿಸುವವು. ಸಾವಯವ ಕೃಷಿಕ ಸಹಕಾರಿ ಘಟಕಗಳು ಉತ್ಪನ್ನಗಳ ಮೌಲ್ಯವರ್ಧನೆ, ಬೆಲೆ ಮತ್ತು ಗುಣಮಟ್ಟ ನಮೂದಿಸುವಿಕೆ, ಪ್ಯಾಕಿಂಗ್, ಪ್ರಮಾಣೀಕರಣಕ್ಕೆ ಹಾಗೂ ಮಾರಾಟಕ್ಕೆ ಸಹಾಯ ಕಲ್ಪಿಸುವವು.

ರಾಜ್ಯ ಸರ್ಕಾರವು ಸಾವಯವ ಕೃಷಿಗೆ ಪ್ರೋತ್ಸಾಹ ನೀಡುವಲ್ಲಿ ರೈತರ ವ್ಯಾಪಾರಿ ಘಟಕಗಳು , ಕಂಪೆನಿ ಕಾಯ್ದೆ 2002ರ ಅಡಿ ಕೆಲಸ ನಿರ್ವಹಿಸಲು ಅನುಕೂಲತೆಗಳನ್ನು ಕಲ್ಪಿಸಿಕೊಡಬಹುದಾಗಿರುತ್ತದೆ. ಈಗಿನ ಬೆಳೆ ಪದ್ಧತಿಯನ್ನು ಬದಲಾಯಿಸಿ ಸೂಕ್ತ ಸಾವಯವ ಕೃಷಿಯ ಬೆಳೆ ಪದ್ಧತಿಗಳನ್ನು ಅಳವಡಿಸಲು ಪ್ರಯತ್ನಗಳನ್ನು ಮಾಡಲಾಗುವದು. ಈ ದಿಸೆಯಲ್ಲಿ ರಾಜ್ಯದ ಕೆಲ ಸೂಕ್ತ ಪ್ರದೇಶಗಳನ್ನು ಇದಕ್ಕಾಗಿ ಅಳವಡಿಸಿಕೊಳ್ಳಲಾಗುವದು. ಪ್ರತಿ ಹೋಬಳಿಮಟ್ಟದಲ್ಲಿ ಒಂದು ಗ್ರಾಮದ 200-500 ಎಕರೆ ಪ್ರದೇಶದಲ್ಲಿ ಸಾವಯವ ಕೃಷಿಯನ್ನು ಅಳವಡಿಸಲು ಪ್ರಯತ್ನಿಸಲಾಗುವದು. ಈ ಅನುಭವದ ಆಧಾರದ ಮೇಲೆ ಉಳಿದ ಪ್ರದೇಶಗಳಿಗೆ ಅನ್ವಯವಾಗುವಂತೆ ಹೆಚ್ಚಿನ ಪ್ರಯತ್ನ ಮತ್ತು ವ್ಯಾಪ್ತಿಯನ್ನು ವಿಸ್ತರಿಸಲಾಗುವದು.

ರಾಜ್ಯದ ವಿವಿಧ ಇಲಾಖೆಗಳಾದ ಕೃಷಿ, ತೋಟಗಾರಿಕೆ, ರೇಷ್ಮೆ, ಪಶುಸಂಗೋಪನೆ ಮುಂತಾದ ಇಲಾಖೆಗಳು ಸಮನ್ವಯಿತ ಕಾರ್ಯಕ್ರಮಗಳಡಿಯಲ್ಲಿ "ಮಾದರಿ ಸಾವಯವ ಕೃಷಿ ಹೊಲ"ಗಳನ್ನು ನಿರ್ಮಿಸಿ ರೈತರಿಗೆ ತರಬೇತಿ, ಶಿಕ್ಷಣ ನೀಡುವಂತಾಗಬೇಕೆನ್ನುವುದು ಈ ನೀತಿಯ ಮುಖ್ಯ ಗುರಿ.

ಸಾವಯವ ಕೃಷಿ ಕುರಿತು ವ್ಯಾಪಕ ಮಾಹಿತಿ ಲಭ್ಯವಾಗುವಂತೆ ದೂರದರ್ಶನ, ಆಕಾಶವಾಣಿ, ಪತ್ರಿಕಾ ಮಾಧ್ಯಮಗಳು, ರೈತಮೇಳಗಳು, ಗೋಷ್ಠಿಗಳು, ಮುಂತಾದ ಕಾರ್ಯಕ್ರಮಗಳನ್ನು ಆಯೋಜಿತಗೊಳಿಸಲಾಗುವುದು.

ಶಿಶು ಆಹಾರಗಳನ್ನು ರಾಸಾಯನಿಕಗಳಿಂದ ಮುಕ್ತಗೊಳಿಸಲು ಇವುಗಳ ಉತ್ಪಾದನೆಯಲ್ಲಿ ಸಾವಯವ ಕೃಷಿ ಉತ್ಪನ್ನಗಳನ್ನು ಬಳಸಲು ಪ್ರೋತ್ಸಾಹಿಸಲಾಗುವುದು. ಶುದ್ಧ ಆಹಾರ ಮತು ನೀರು ಲಭ್ಯವಿರುವ ಸಾವಯವ ಗ್ರಾಮಗಳಲ್ಲಿ "ಪರಿಸರ ಪ್ರವಾಸ"ವನ್ನು ಬಲಪಡಿಸಲು ಸಮೂಹ ಮಾಧ್ಯಮಗಳ ಮುಖಾಂತರ ವಿಶೇಷ ಪ್ರಚಾರ ನೀಡಲಾಗುವುದು.

ಜೀವವೈವಿಧ್ಯ ಸಮೃದ್ಧ ಪ್ರದೇಶಗಳಲ್ಲಿ ಜಲಮೂಲಗಳು ರಾಸಾಯನಿಕಗಳಿಂದ ಮುಕ್ತವಾಗಿರುವಂತೆ ಗಮನವಹಿಸಲಾಗುವದು. ರಾಜ್ಯದ ಕೆಲ ಪ್ರದೇಶಗಳಲ್ಲಿ ರಾಸಾಯನಿಕಗಳ ಬಳಕೆ ಕಡಿಮೆ ಇದ್ದು ಇಂತಹ ಪ್ರದೇಶಗಳನ್ನು "ರಸಾಯನ ರಹಿತ / ಕೀಟನಾಶಕ ರಹಿತ ವಲಯ"ಗಳೆಂದು ಗುರುತಿಸಲಾಗುವುದು.

'ಹಿತ್ತಲಗಿಡ'ದ ಸಾರ್ಥಕತೆ

ಸಂಪಾದಕರಿಗೆ ವಂದನೆಗಳು,

ಮಾನ್ಯರೆ, ತಾವು ಪ್ರಕಟಿಸುತ್ತಿರುವ "ಹಿತ್ತಲಗಿಡ" ಚಾತುರ್ಮಾಸಿಕ ಪತ್ರಿಕೆ (ಜನವರಿ-ಏಪ್ರಿಲ್, 2004)ಯನ್ನು ಬೆಂಗಳೂರಿಗೆ ಹೋಗುವಾಗ ಬಸ್ಸಿನಲ್ಲಿ ಬೇರೆಯವರಿಂದ ಪಡೆದು ಓದಿದೆ. ಪತ್ರಿಕೆಯ 5ನೇ ಪೇಜಿನಲ್ಲಿ ಪ್ರಕಟವಾಗಿರುವ "ರಾಸುಗಳಿಗೆ ಉಣ್ಣೆ ನಿಯಂತ್ರಣ" ಸಂಜೀವಿನಿಯಂತಃ ಔಷಧಿಯಾಗಿದೆ. ಈ ಔಷಧಿ 3 ತಿಂಗಳು ಮೊದಲೇ ತಿಳಿದಿದ್ದರೆ ನನ್ನಲ್ಲಿದ್ದ 22 ಸಾವಿರ ರೂಪಾಯಿ ಬೆಲೆಯ ಸೀಮೆ ಹಸು ಉಳಿಯುತ್ತಿತ್ತು. ಹಿಂದೆ ಡಾಕ್ಟರ್ ಬರೆದುಕೊಟ್ಟ ಔಷಧಿ ಹಸುವಿನ ಮೈಗೆ ಹಾಕಿ ಉಣ್ಣೆ ನಿಯಂತ್ರಣ ಮಾಡಲು ಹೋಗಿ ಔಷಧಿ ಹಚ್ಚಿದ 20 ನಿಮಿಷದಲ್ಲಿ ಹಸು ಅಸ್ವಸ್ಥವಾಗಿ ಬಿದ್ದು ಮುಂದೆ ಒಂದು ಗಂಟೆಯಲ್ಲಿ ಅಸುನೀಗಿತು. ಡಾಕ್ಟರ್ ಬಂದರೂ ಉಳಿಸಲಾಗಲಿಲ್ಲ. ಆದರೆ ತಮ್ಮ ಪತ್ರಿಕೆಯಿಂದ ತಿಳಿದು ಪ್ರಯೋಗಿಸಿದ ಬೇರೆ ರಾಸುಗಳಲ್ಲಿ ಉಣ್ಣೆ ಮಾಯವಾಗಿದೆ. ಈ ಔಷಧಿ ಕಂಡು ಹಿಡಿದವರಿಗೆ ವಂದನೆಗಳನ್ನು ನನ್ನ ಪರವಾಗಿ ತಿಳಿಸಬೇಕೆಂದು ಪ್ರಾರ್ಥಿಸುತ್ತೇನೆ. ಸಾವಿರಾರು ರೂಪಾಯಿ ಸಂಬಳ ತೆಗೆದುಕೊಳ್ಳುವ ಡಾಕ್ಟರ್‌ಗಳನ್ನು ಮೀರಿಸುವ ಶಕ್ತಿ ಇವರಲ್ಲಿದೆ. ದಯವಿಟ್ಟು ಮುಂದಿನ ಸಂಚಿಕೆಯಲ್ಲಿ ಇವರ ಸಂಪೂರ್ಣ ವಿಳಾಸ ತಿಳಿಸಿ.ಈ ಔಷಧಿಯನ್ನು ಇತರರಿಗೆ ಹೇಳಿ ಉಪಯೋಗಿಸುವಂತೆ ತಿಳಿಸಲು ಅನುಕೂಲವಾಗುತ್ತದೆ.

ಇಂತಿ ವಂದನೆಗಳು,

ಅಣ್ಣಪ್ಪ, ತಿಮ್ಮಲಾಪುರ,

(ಹಿತ್ತಲಗಿಡದಲ್ಲಿ ಪ್ರಕಟಿಸಿದ ನಾಟಿ ಪದ್ಧತಿ ತಮಗೆ ಇಷ್ಟೊಂದು ಉಪಯುಕ್ತವಾಗಿರುವುದು ತಿಳಿದು ಅಪಾರ ಸಂತೋಷವಾಗಿದೆ. 10ನೇ ವರ್ಷಕ್ಕೆ ಕಾಲಿಡುತ್ತಿರುವ ಈ ಪ್ರಯತ್ನ ತಳಮಟ್ಟದಲ್ಲಿ ಸಾರ್ಥಕವಾಗಿರುತ್ತದೆ ಎಂದು ಭಾವಿಸುತ್ತೇನೆ. ಈ ಅನುಶೋಧಕರ ವಿಳಾಸ: ಶ್ರೀ ಬಸವರಾಜ ಸಂತೇಶಿವರ, ಸಂತೇಶಿವರ ಗ್ರಾಮ, ಚನ್ನರಾಯಪಟ್ಟಣ ತಾಲ್ಲೂಕು, ಹಾಸನ ಜಿಲ್ಲೆ ಫೋ: 08176-35745)

ಸಂಪಾದಕರು

Dear Prof. Prakash,
I've read about Mr. Bhandari's Arecanut dehusking machine. And I'm interested to find out more before I purchase the machine. Please help me by providing the contact of Mr. Bhandari. I have searched for many months for such a machine.
Thank you, Best Regards,
Edwin Tan
Business Development & Marketing Manager
Choon Hong & Co Pvt Ltd., 18, Defu Lane 1, Singapore 539491, Tel: +65 6284 6565

(Thanks, We pursue the matter through NIF)

Editor

ಜೀವವೈವಿಧ್ಯ ಕಾಯ್ದೆಯ ಆತಂಕಗಳು

ವಿಶ್ವ ವ್ಯಾಪಾರ ಒಪ್ಪಂದ (WTO) ಹತ್ತು ವರ್ಷಗಳನ್ನು ಪೂರ್ತಿಗೊಳಿಸಲಿರುವ ಹಿನ್ನೆಲೆಯಲ್ಲಿ ದಿನಾಂಕ 6.10.2004ರಂದು ಒಂದು ದಿನದ ವಿಚಾರ ಗೋಷ್ಠಿಯನ್ನು ಬೆಂಗಳೂರಿನ ಯುನೈಟೆಡ್ ಥಿಯಾಲಾಜಿಕಲ್ ಕಾಲೇಜಿನಲ್ಲಿ 'ಗ್ರೀನ್' (GREEN) ಪ್ರತಿಷ್ಠಾನ, ಮತ್ತಿತರ ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ ಏರ್ಪಡಿಸಿತ್ತು. ರಾಜ್ಯವಿಧಾನ ಪರಿಷತ್ ಸದಸ್ಯರು ಹಾಗು ಮಾತೃಭೂಮಿ ಟ್ರಸ್ಟ್‌ನ ಅಧ್ಯಕ್ಷರು ಆದ ಶ್ರೀ ಬಸವರಾಜ ಬೊಮ್ಮಾಯಿ ಈ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಖ್ಯಾತ ಪರಿಸರವಾದಿ ಡಾ. ವಂದನಾ ಶಿವ ಪ್ರಧಾನ ಭಾಷಣ ಮಾಡಿದ ಈ ಕಾರ್ಯಕ್ರಮದಲ್ಲಿ ರಾಜ್ಯ ಮತ್ತು ನೆರೆ ರಾಜ್ಯ ಆಂಧ್ರ ಪ್ರದೇಶದ ಅನೇಕ ಸ್ವಯಂ ಸೇವಾ ಸಂಘಗಳು ಮತ್ತು ಕೃಷಿಕರು ಭಾಗವಹಿಸಿದ್ದರು.

ಈ ಸಮಾಲೋಚನಾ ಸಭೆಯಲ್ಲಿ ವಿಶ್ವವ್ಯಾಪಾರ ಒಪ್ಪಂದದಿಂದ ಭಾರತೀಯ ಕೃಷಿ ಮತ್ತು ಆಹಾರ ಭದ್ರತೆಯ ವ್ಯವಸ್ಥೆಗಳ ಮೇಲಾಗಿರುವ ಪರಿಣಾಮಗಳನ್ನು ಗಂಭೀರವಾಗಿ ಚರ್ಚಿಸಲಾಯಿತು. ಗ್ರೀನ್ ಫೌಂಡೇಶನ್ ಮುಖ್ಯಸ್ಥರಾದ ಡಾ. ವನಜಾರಾಮ ಪ್ರಸಾದ್ ಮತ್ತು ಹಿತ್ತಲಗಿಡ ಸಂಪಾದಕ ಡಾ. ಟಿ.ಎಸ್. ಪ್ರಕಾಶ್ ಕಮ್ಮರಡಿ ಸದ್ಯ ಜಾರಿಯಲ್ಲಿರುವ **ಜೀವವೈವಿಧ್ಯ ಕಾಯ್ದೆ**ಯ ಕುರಿತು ವಿಶೇಷ ಚರ್ಚೆಯನ್ನು ನಡೆಸಿಕೊಟ್ಟರು.

ಮರುದಿನ ದೊಡ್ಡ ಮರಳವಾಡಿ ಗ್ರಾಮದಲ್ಲಿ "ಜೀವ ವೈವಿಧ್ಯಮೇಳ - ರೈತರ ಹಕ್ಕು ಮತ್ತು ಜೀವ ವೈವಿಧ್ಯ ಮಸೂದೆ" ಕುರಿತು ತಳಮಟ್ಟದ ಚರ್ಚೆಯೊಂದನ್ನು ಆಯೋಜಿಸಿತ್ತು. ತೀರ್ಥಹಳ್ಳಿ ಶಾಸಕರಾದ ಶ್ರೀ ಆರಗ ಜ್ಞಾನೇಂದ್ರ ಕಾರ್ಯಕ್ರಮ ಉದ್ಘಾಟಿಸಿದರು. ಈ ಮೇಳದಲ್ಲಿ ಮುಖ್ಯ ಅತಿಥಿಗಳಾಗಿ ಕರ್ನಾಟಕ ಜೀವವೈವಿಧ್ಯ ಮಂಡಳಿ ಕಾರ್ಯನಿರ್ವಹಣಾಧಿಕಾರಿ ಡಾ. ಸತ್ಯನಾರಾಯಣ ಭಟ್ ಮುಂತಾದವರು ಭಾಗವಹಿಸಿದ್ದರು. ಈ ಸಭೆಯಲ್ಲಿ ಜೀವ ವೈವಿಧ್ಯ ಕಾಯ್ದೆ-2004 ಕುರಿತು ಹಲವಾರು ನಿರ್ಣಯಗಳನ್ನು ಕೈಗೊಂಡಿದ್ದು ಇವುಗಳ ಅನುಷ್ಠಾನಕ್ಕೆ ಆಗ್ರಹಿಸಿ ರಾಜ್ಯದ ಮುಖ್ಯಮಂತ್ರಿಗಳಿಗೆ ಮನವಿಪತ್ರ ನೀಡಲು ತೀರ್ಮಾನಿಸಲಾಗಿರುತ್ತದೆ. ಈ ಪತ್ರದ ಪ್ರಮುಖ ಅಂಶಗಳನ್ನು ಈ ಕೆಳಗೆ ಕೊಡಲಾಗಿದೆ.

ಭಾರತ ಸರ್ಕಾರವು ಏಪ್ರಿಲ್ 5 ನೇ, 2004ರಂದು ಜೀವವೈವಿಧ್ಯ ಕಾಯ್ದೆ - 2004ರಲ್ಲಿ ಸ್ಥಳೀಯ ಸಂಸ್ಥೆಗಳ ಮಟ್ಟದಲ್ಲಿ ಜೀವವೈವಿಧ್ಯ ನಿರ್ವಹಣಾ ಮಂಡಳಿಗಳನ್ನು ಸ್ಥಾಪಿಸಲು ಅನುವು ಮಾಡಿಕೊಟ್ಟಿದೆ. ಈ ಕಾಯ್ದೆಯಲ್ಲಿ ಸೂಚಿಸಿರುವಂತೆ ಜೀವವೈವಿಧ್ಯ ನಿರ್ವಹಣಾ ಮಂಡಳಿಗಳ ಮುಖ್ಯ ಕೆಲಸ ಸಮುದಾಯ ಜೀವವೈವಿಧ್ಯ ದಾಖಲಾತಿಗಳನ್ನು ತಯಾರಿಸುವುದು ಮಾತ್ರವಾಗಿರುತ್ತದೆ. ಆದರೆ ಇದಕ್ಕೂ ಮುಖ್ಯವಾದ, ಜೀವವೈವಿಧ್ಯ ಸಂರಕ್ಷಣೆ, ಸುಸ್ಥಿರ ಬಳಕೆ ಮತ್ತು ಇವುಗಳನ್ನು ಕಾಪಾಡುವಲ್ಲಿ ಸ್ಥಳೀಯ ಸಮುದಾಯಗಳ ಪಾತ್ರವನ್ನು ಇಲ್ಲಿ ಕಡೆಗಣಿಸಲಾಗಿದೆ.

ಜೀವವೈವಿಧ್ಯ ಮತ್ತು ಸಮುದಾಯ ಜ್ಞಾನವನ್ನು ಹೀಗೆ ದಾಖಲಿಸುವುದರಿಂದ ಇವನ್ನು ಸುಲಭವಾಗಿ ಕಳವು ಮಾಡಲು ಅನುವು ಮಾಡಿಕೊಟ್ಟಂತಾಗುತ್ತದೆ. ಇದನ್ನು ತಪ್ಪಿಸಲು ಕಾನೂನುಬದ್ಧವಾಗಿ ಮತ್ತು ಪರಿಣಾಮಕಾರಿಯಾಗಿ ಯಾವುದೇ ರೀತಿಯ ನಿಯಮ ಈ ಕಾಯ್ದೆಯಲ್ಲಿ ಇಲ್ಲದಿರುವುದು ಆತಂಕದ ವಿಚಾರವಾಗಿದೆ.

ಜೊತೆಗೆ ಈ ಕಾಯ್ದೆಯಲ್ಲಿ ಜೀವವೈವಿಧ್ಯ ನಿರ್ವಹಣಾ ಮಂಡಳಿಗಳಿಗೆ ಕೇವಲ ಸಲಹಾ ಸಮಿತಿಯ ಪಾತ್ರವನ್ನು ನೀಡಿ ಉಳಿದೆಲ್ಲಾ ಪ್ರಮುಖ ಜವಾಬ್ದಾರಿ ಮತ್ತು ಅಧಿಕಾರಗಳನ್ನು ರಾಜ್ಯ ಜೀವವೈವಿಧ್ಯ ಸಮಿತಿ ಮತ್ತು ರಾಷ್ಟ್ರೀಯ ಜೀವವೈವಿಧ್ಯ ಪ್ರಾಧಿಕಾರಗಳಿಗೆ ನೀಡಲಾಗಿದೆ. ಇದು ಸ್ಥಳೀಯ ಸಂಸ್ಥೆಗಳಿಗೆ ಪಂಚಾಯ್ತಿರಾಜ್ ಸಂವಿಧಾನ ತಿದ್ದುಪಡಿಯಲ್ಲಿ ನೀಡಿರುವ ಅಧಿಕಾರಗಳನ್ನು ಉಲ್ಲಂಘಿಸಿದಂತಾಗಿದೆ. ಜೊತೆಗೆ ರಾಷ್ಟ್ರೀಯ ಜೀವವೈವಿಧ್ಯ ಪ್ರಾಧಿಕಾರದ ರಚನೆಯಲ್ಲಿ ಗ್ರಾಮ ಸಮುದಾಯದ ಅಥವಾ ಸಮುದಾಯ ಆಧಾರಿತ ಸಂಸ್ಥೆಗಳ ಪ್ರತಿನಿಧಿ ಇಲ್ಲದಿರುವುದು ನಿರಾಶೆಯುಂಟುಮಾಡಿದೆ.

ಮುಖ್ಯವಾಗಿ ಹೇಳುವುದಾದರೆ ಸ್ಥಳೀಯ ರೈತರು, ಮಹಿಳೆಯರು ಮತ್ತು ಸಮುದಾಯಗಳು ಅರಣ್ಯ, ಜಲಸಂಪನ್ಮೂಲ, ಪ್ರಾಣಿ, ಪಕ್ಷಿ, ಮರ, ಗಿಡಗಳು, ಬೆಳೆ ಮತ್ತು ಜಾನುವಾರುಗಳ ಜೊತೆ ನಿಕಟ ಸಂಬಂಧ ಹೊಂದಿರುವುದರಿಂದ ಇವುಗಳನ್ನು ಸಂರಕ್ಷಿಸುವ ಮತ್ತು ಬಳಸುವ ಹಕ್ಕು ಇವರಿಗೇ ಇರಬೇಕಾಗಿದೆ. ಜೀವವೈವಿಧ್ಯ ಸಂರಕ್ಷಣೆಗೆ ಸಂಬಧಪಟ್ಟಂತೆ ರೈತಾಪಿ ವರ್ಗದ ಹಕ್ಕುಗಳನ್ನು ಕಾಯುವಲ್ಲಿ ಜೀವವೈವಿಧ್ಯ ಕಾಯ್ದೆ 2002 ಕೆಲವು ಅವಕಾಶಗಳನ್ನು ಕಲ್ಪಿಸಲಾಗಿತ್ತು. ಆದರೆ 2004ರ ಹೊಸ ಕಾಯ್ದೆಯು ಈ ನಿಟ್ಟಿನಲ್ಲಿ ಮತ್ತಷ್ಟು ಮುಂದುವರಿಯಲು ಅವಕಾಶ ಮಾಡಿಕೊಟ್ಟಿಲ್ಲ.

ಸಭೆಯ ಪ್ರಮುಖ ನಿರ್ಧಾರಗಳು

1. ಸ್ಥಳೀಯ ಜೀವ ವೈವಿಧ್ಯ ಮತ್ತು ಜ್ಞಾನಕ್ಕೆ ಸಂಬಂಧಪಟ್ಟಂತೆ ಸ್ಥಳೀಯ ರೈತ, ಮಹಿಳೆ ಸಮುದಾಯಗಳಿಗೆ ಹಕ್ಕು, ಅಧಿಕಾರ ಮತ್ತು ಜವಾಬ್ದಾರಿಗಳನ್ನು ಕೊಡುವ ಬಗ್ಗೆ ಈ ಕಾಯ್ದೆಯಲ್ಲಿ ತಿದ್ದುಪಡಿಯಾಗುವ ತನಕ ಈ ಜೀವವೈವಿಧ್ಯ ನಿರ್ವಹಣಾ ಮಂಡಳಿಗಳನ್ನು ರಚಿಸುವಂತಿಲ್ಲ.

2. ಈ ಸ್ಥಳೀಯರ ವ್ಯಾಪ್ತಿಯಲ್ಲಿ ಬರುವ ಯಾವುದೇ ಸಂಪನ್ಮೂಲ ಮತ್ತು ಜ್ಞಾನವನ್ನು ಹೊರಗಿನವರು ಬಳಸಬೇಕಾದರೆ ಅಥವಾ ಉಪಯೋಗಿಸಬೇಕಾದರೆ ಇವರ ಅನುಮತಿ ಮತ್ತು ಒಪ್ಪಿಗೆಯನ್ನು ಪಡೆಯತಕ್ಕದ್ದು ಮತ್ತು ಅವರು ಆ ಸಂಪನ್ಮೂಲ ಮತ್ತು ಜ್ಞಾನವನ್ನು ಯಾವ ಉದ್ದೇಶಕ್ಕೆ ಬಳಸುತ್ತಾರೆ ಎಂಬ ಸಂಪೂರ್ಣ ಮಾಹಿತಿಯನ್ನು ನೀಡತಕ್ಕದ್ದು. ಈ ರೀತಿ ಅನುಮತಿ ನೀಡಬೇಕಾದರೆ ಗ್ರಾಮ ಸಭೆ/ಹಳ್ಳಿ/ಆದಿವಾಸಿ ಸಮುದಾಯಗಳ ಜೊತೆ ಸಮಾಲೋಚಿಸಬೇಕು.


3. ಸ್ಥಳೀಯರ ವ್ಯಾಪ್ತಿಯಲ್ಲಿ ಬರುವ ಜೀವವೈವಿಧ್ಯ ಮತ್ತು ಜ್ಞಾನಕ್ಕೆ ಸಂಬಂಧಿಸಿದಂತೆ ಯಾವುದೇ ಒಂದು ಕ್ರಮವನ್ನು ತೆಗೆದುಕೊಳ್ಳುವ ಮುನ್ನ ರಾಜ್ಯ ಜೀವವೈವಿಧ್ಯ ಮಂಡಳಿ, ಕೇಂದ್ರ ಜೀವವೈವಿಧ್ಯ ಪ್ರಾಧಿಕಾರ ಮತ್ತು ಸಂಬಂಧಪಟ್ಟ ಎಲ್ಲ ಸರ್ಕಾರೀ ಸಂಸ್ಥೆಗಳು ಇವರ ಜೊತೆ ಸಮಾಲೋಚನೆ ಮಾಡತಕ್ಕದ್ದು (ಇದು ಸರ್ಕಾರೀ ಜಮೀನು ಮತ್ತು ಜಲ ಸಂಪನ್ಮೂಲಗಳ ಮೇಲಿನ ಇವರ ಪರಂಪರಾಗತ ಹಕ್ಕು ಮತ್ತು ಅವಲಂಬನೆಗಳನ್ನು ಒಳಗೊಂಡಂತೆ)

4. ಜೀವವೈವಿಧ್ಯದ ಸಂರಕ್ಷಣೆ ಮತ್ತು ಜೀವ ಸಂಪನ್ಮೂಲಗಳ ಸುಸ್ಥಿರ ಬಳಕೆಯ ಜವಾಬ್ದಾರಿ ಈ ಸ್ಥಳೀಯರದ್ದು. ಇದರಿಂದ ಸಿಗುವ ಲಾಭವನ್ನು ನ್ಯಾಯಬದ್ಧವಾಗಿ ಎಲ್ಲರಿಗೂ ಲಭ್ಯವಾಗುವಂತೆ ನೋಡಿಕೊಳ್ಳುವ ಜವಾಬ್ದಾರಿಯೂ ಇವರದ್ದೇ ಆಗಿರುತ್ತದೆ.

5. ಜೀವವೈವಿಧ್ಯ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿರುವ ಸ್ಥಳೀಯ ಸಮುದಾಯದ ಕನಿಷ್ಠ ಇಬ್ಬರು ಪ್ರತಿನಿಧಿಗಳನ್ನು ರಾಷ್ಟ್ರೀಯ ಜೀವವೈವಿಧ್ಯ ಪ್ರಾಧಿಕಾರಕ್ಕೆ ಸದಸ್ಯರನ್ನಾಗಿ ನೇಮಿಸಬೇಕು. ಇಲ್ಲವಾದರೆ ಇದರ ಜೊತೆ ಸಹಕರಿಸುವುದಿಲ್ಲ.

ತೃಣ ಧಾನ್ಯಗಳ ಭಕ್ಷ್ಯ ಭೋಜನ

ಗೆಳೆಯ ಪಿ. ವಿ. ಸತೀಶ್ ಮತ್ತವರ ಡೆಕ್ಕನ್ ಡೆವಲಪ್‌ಮೆಂಟ್ ಸಂಸ್ಥೆ (Deccan Development Society)ಯ ತಂಡ ಆಂಧ್ರ ಪ್ರದೇಶದ ಮೇದಕ್ ಜಿಲ್ಲೆಯ ಪಸ್ತಾಪುರದಲ್ಲಿ ಅದ್ಭುತ ಕ್ರಾಂತಿಯನ್ನೇ ನಡೆಸಿರುವರು. ಸಾವಿರಾರು ಜನ ಬಡ ದಲಿತ ಮಹಿಳೆಯರನ್ನು ಸಂಘಟಿಸಿ ಸುತ್ತಲಿನ ತಳಿ ವೈವಿಧ್ಯ (agro bio-diversity)ವನ್ನು ಸಂರಕ್ಷಿಸಿದ್ದು ಮಾತ್ರವಲ್ಲ ಪರ್ಯಾಯ ಸಾರ್ವಜನಿಕ ಪಡಿತರ ವಿತರಣಾ ವ್ಯವಸ್ಥೆಯನ್ನೇ ಹುಟ್ಟುಹಾಕಿ ಆಹಾರ ಭದ್ರತೆ ವಿಚಾರಕ್ಕೆ ಹೊಸತೊಂದು ಆಯಾಮ ಒದಗಿಸಿರುವರು. ಹಾಗೇ, ಸಜ್ಜೆ, ನವಣೆ, ಸಾಮೆ ಇವೇ ಮೊದಲಾದ ಒಣ ಭೂಮಿಯ ತೃಣ ಧಾನ್ಯಗಳ ಆಧಾರಿತ ಸುಸ್ಥಿರ ಆಹಾರ ವ್ಯವಸ್ಥೆಯನ್ನೇ ಇವರು ಸೃಷ್ಟಿಸಿರುವರು. ಈ ತೃಣ ಧಾನ್ಯಗಳಿಂದ ದೋಸೆ, ಪಕೋಡ, ಹೋಳಿಗೆ, ಲಾಡು, ಪಾಯಸ ಮೊದಲಾದ ಭಕ್ಷ್ಯ ಭೋಜನಗಳನ್ನು ತಯಾರಿಸಿ, ತಮ್ಮದೇ ಒಂದು Ethnic ಕೆಫೆಯನ್ನು ಸ್ಥಾಪಿಸಿ ಜಹಿರಾಬಾದ್ ನಗರಗಳ ಗ್ರಾಹಕರಿಗೆ ರಸದೌತಣವನ್ನೇ ಏರ್ಪಡಿಸಿರುವರು. ಈ ಎಲ್ಲಾ ತಿಂಡಿ ತಿನಿಸುಗಳನ್ನು ವ್ಯವಸ್ಥಿತವಾಗಿ ತಯಾರಿಸುವ ರೀತಿಯ ಬಗ್ಗೆ ಕಿರು ಪುಸ್ತಕಗಳನ್ನು ಹೊರ ತಂದಿದ್ದು ಇದರಲ್ಲಿ ಅವುಗಳಲ್ಲಿರುವ ಪೌಷ್ಠಿಕಾಂಶಗಳ ಮಟ್ಟ ಹಾಗೇ ಔಷಧಿ ಗುಣಗಳನ್ನೂ ಕೊಟ್ಟಿರುವರು. ಕೇವಲ ತಿಂಡಿ ಮತ್ತು ಬೆಲೆಯ ವಿವರವನ್ನು ಮಾತ್ರ ನೀಡುವ ಸಾಮಾನ್ಯ ಹೋಟೆಲ್‌ಗಳಿಗಿಂತ ಈ ಪ್ರಯತ್ನ ಭಿನ್ನವಾಗಿರುತ್ತದೆ. ಈ



ಕೆಫೆಯಲ್ಲಿ ನವಣೆ (ಕೊರ್ರೆ)ಯನ್ನು ಬಳಸಿ ರುಚಿಕರವಾದ ದೋಸೆ, ಬಜ್ಜಿ, ವಡೆ, ಚಕ್ಕುಲಿ ಸಾಮೆಯಿಂದ ಇಡ್ಲಿ, ಕಿಚಡಿ, ಪಾಯಸ, ರಾಗಿಯಿಂದ ರೊಟ್ಟಿ ಅಂಬಲಿ, ಸಜ್ಜೆಯಿಂದ ಹಪ್ಪಳ, ರೊಟ್ಟಿ, ಮಾಲದಿ, ಜೋಳದ ಅರಳಿನಿಂದ ಲಡ್ಡು ಮುಂತಾದವುಗಳನ್ನು ರುಚಿಕರವಾಗಿ ತಯಾರಿಸಿ ಕೊಡಲಾಗುತ್ತದೆ. ಈ ರೀತಿಯ ಕೆಫೆಗಳನ್ನು ನಗರದ ಗೃಹಿಣಿಯರು ಮತ್ತು ಯುವಕರ ಜಾಲದ ಮೂಲಕ ಸತೀಶ್‌ರ ತಂಡ ನಿರ್ವಹಿಸುತ್ತಿರುವರು. ಹೀಗೆ, ಜೀವವೈವಿಧ್ಯ ಸಂರಕ್ಷಣೆ ಮತ್ತು ಆ ಮೂಲಕ ಪೌಷ್ಠಿಕಾಂಶಗಳ ಭದ್ರತೆಯನ್ನು ಒದಗಿಸುವಲ್ಲಿ ಈ ಸಂಸ್ಥೆಯು ಒಂದು ಮಹತ್ವದ ಹೆಜ್ಜೆಯನ್ನೆ ಇಟ್ಟಿರುತ್ತದೆ.

ನಿಮ್ಮ ಕುತೂಹಲ ಮತ್ತು ಉತ್ಸಾಹದ ಅರಿವಿರುವ ನಾವು ಈ ಸಲ ಜೋಳದ ಅರಳಿನಿಂದ ಲಡ್ಡು ಮತ್ತು ಸಜ್ಜೆಯ ಮಾಲದಿ ಮಾಡುವ ಕ್ರಮವನ್ನು ತಿಳಿಸುತ್ತೇವೆ. ಇದೇ ರೀತಿ ಜೋಳ, ಬಾರ್ಲಿ ಬಳಸಿ ಈ ಖಾದ್ಯ ತಯಾರಿಸಬಹುದು. ನೀವು ಮಾಡಿ ತಿಂದು, ರುಚಿ ಹೇಗಿತ್ತೆಂದು ನಮಗೂ ತಿಳಿಸಿ.

ಜೋಳದ ಅರಳಿನಿಂದ ಲಡ್ಡು

ಜೋಳ (1 ಕೆಜಿ)ವನ್ನು ಸ್ವಚ್ಛಗೊಳಿಸಿ, ನೀರಲ್ಲಿ ತೊಳೆದು, ರಾತ್ರಿಯಿಡಿ ನೆನೆಹಾಕಿ ಅರ್ಧಗಂಟೆ ನೆರಳಲ್ಲಿ ಒಣಗಿಸಿ ದೊಡ್ಡ ಕಬ್ಬಿಣದ ಪಾತ್ರೆಯಲ್ಲಿ ಹಾಕಿ ಸಮ ಶಾಖದಲ್ಲಿ ಚಟಪಟ ಎಂದು ಸಿಡಿಯುವವರೆಗೆ ಹುರಿಯಬೇಕು. ಅರಳು ತಯಾರು.

ಕುಟ್ಟಿಪುಡಿ ಮಾಡಿದ 750 ಗ್ರಾಂ ಬೆಲ್ಲವನ್ನು ನೀರಿನಲ್ಲಿ ಹಾಕಿ 20 ನಿಮಿಷಗಳವರೆಗೆ ಕುದಿಸಿರಿ. ಪಾಕವು ಹದವಾಗಿ ತೆಳ್ಳಗೆ ಕಡ್ಡಿಯಂತೆ ಬೀಳುವಂತಾದಾಗ ಒಲೆಯಿಂದ ಕೆಳಗಿಳಿಸಿ ಅವಶ್ಯವಾದಷ್ಟು ಏಲಕ್ಕಿಯನ್ನು ಪುಡಿಮಾಡಿ ಬೆರೆಸಿ. ಇದಕ್ಕೆ ಹುರಿದಿಟ್ಟುಕೊಂಡ ಒಂದು ಕೆ.ಜಿ ಅರಳನ್ನು ಪಾಕ ಬಿಸಿ ಇರುವಾಗಲೇ ಹಾಕಿ ಚೆನ್ನಾಗಿ ಕಲೆಸಿಡಿ ಹಾಗೂ ಬಿಸಿ ಆರುವ ಮುನ್ನ ದುಂಡಗೆ ಎರಡೂ ಕೈಗಳಿಂದ ಒತ್ತಿ, ಒತ್ತಿ ಲಡ್ಡನ್ನು ತಯಾರಿಸಿ.

ಸಜ್ಜೆಯ "ಮಾಲದಿ"

ಕೆಲವು ವಿಶೇಷ ದಿನಗಳಲ್ಲಿ ಮಾಡುವ ಈ ಖಾದ್ಯ ಬಹು ರುಚಿಯಾದದ್ದು. ಸಜ್ಜೆಯ ಹಿಟ್ಟಿನಿಂದ (1 ಕೆ.ಜಿ) ಮೊದಲು ತೆಳ್ಳಗೆ ರೊಟ್ಟಿಯನ್ನು ಮಾಡಿಟ್ಟುಕೊಳ್ಳಿ. ಬಿಸಿ ಇರುವಾಗಲೇ ಈ ರೊಟ್ಟಿಗಳನ್ನು ಸಣ್ಣ ಸಣ್ಣ ತುಂಡುಗಳನ್ನಾಗಿ ಮಾಡಿಟ್ಟುಕೊಳ್ಳಿ. 100 ಗ್ರಾಂ ಒಣ ಕೊಬ್ಬರಿ ಸರಿಯಾಗಿ ತುರಿದಿಟ್ಟುಕೊಂಡು, ಇದಕ್ಕೆ 100 ಗ್ರಾಂ ನೆಲಗಡಲೆ ಬೀಜಗಳನ್ನು ಸೇರಿಸಿಡಿ. ರುಚಿಗೆ ತಕ್ಕಷ್ಟು ಬಡೇ ಸೋಪು, ಹುರಿಗಡಲೆ (100 ಗ್ರಾಂ), ಸ್ವಲ್ಪ ಎಳ್ಳು, ಗಸಗಸೆಯನ್ನು 500 ಗ್ರಾಂ ಬೆಲ್ಲದಲ್ಲಿ ಸೇರಿಸಿ ಚೆನ್ನಾಗಿ ಕಲಸಿಟ್ಟುಕೊಳ್ಳಿ. ಸುಗಂಧಕ್ಕಾಗಿ ಬೇಕಾದಷ್ಟು ಏಲಕ್ಕಿಯನ್ನು ಪುಡಿಮಾಡಿ ಬೆರೆಸಿ. ಈಗ ಈ ಮಿಶ್ರಣಕ್ಕೆ ಸಜ್ಜೆ ರೊಟ್ಟಿಯ ಸಣ್ಣ ತುಂಡುಗಳನ್ನು 100 ಗ್ರಾಂ ತುಪ್ಪ ಬೆರೆಸಿ, ಒಟ್ಟು ಮಿಶ್ರಣವನ್ನು ಗಟ್ಟಿಯಾಗಿ ದುಂಡಗೆ ಒತ್ತಿ ಲಡ್ಡುಗಳನ್ನಾಗಿ ಮಾಡಿಡಿ. ನಿಮ್ಮ ಇಷ್ಟದ ಸಜ್ಜೆಯ ಮಾಲದಿ ಈಗ ಸಿದ್ಧ.

ಈ ಮೇಲೆ ತಿಳಿಸಿದ ಖಾದ್ಯ ಪದಾರ್ಥಗಳಲ್ಲಿ ಇರುವ ಪೌಷ್ಠಿಕಾಂಶಗಳ ವಿವರವನ್ನು 'ಕೆಫೆ ಎಥಿಕ್' ನವರು ತಿಳಿಸಿರುತ್ತಾರೆ. ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ: Deccan Development Society, Pastapur, Zaheerabad - 502 220, Medak Dist., Andhra Pradesh, Ph: 08451 282271/ 282785.

ರಾಜ್ಯ ಮಟ್ಟದ ಕೃಷಿಪತ್ರಿಕೋದ್ಯಮ ಪ್ರಶಸ್ತಿ ಪ್ರಕಟ

ಧಾರವಾಡದ ಪರ್ಯಾಯ ಕೃಷಿಮಾಧ್ಯಮ ಕೇಂದ್ರ ಸ್ಥಾಪಿಸಿರುವ ರಾಜ್ಯಮಟ್ಟದ ಕೃಷಿಪತ್ರಿಕೋದ್ಯಮ ಪ್ರಶಸ್ತಿಯ 2004ನೇ ಸಾಲಿಗಾಗಿ ಶಿವಮೊಗ್ಗ ಜಿಲ್ಲೆ ಚುರ್ಚಿಗುಂಡಿಯ ಶ್ರೀ ಬಿ.ಎನ್.ನಂದೀಶ್ ಹಾಗೂ ತುಮಕೂರಿನ ಶ್ರೀ ಮಲ್ಲಿಕಾರ್ಜುನ ಹೊಸಪಾಳ್ಯ ಆಯ್ಕೆಯಾಗಿದ್ದಾರೆ.

ಕನ್ನಡದಲ್ಲಿ ಅರ್ಥಪೂರ್ಣ ಕೃಷಿ ಪತ್ರಿಕೋದ್ಯಮಕ್ಕೆ ಉತ್ತೇಜನ ನೀಡುವುದಕ್ಕಾಗಿ ಕೃಷಿಮಾಧ್ಯಮ ಕೇಂದ್ರ ಎರಡು ವಿಭಾಗಗಳಲ್ಲಿ ಪ್ರಶಸ್ತಿ ನೀಡುತ್ತಿದೆ. ಈ ಬಾರಿ ಕೃಷಿಕರ ವಿಭಾಗದಲ್ಲಿ ಶ್ರೀ ಬಿ.ಎನ್.ನಂದೀಶ್ ಅವರ 'ಗೊಬ್ಬರ ಬಳಸದೆ ಅಬ್ಬರದ ತೆನೆ ' (ಅಡಿಕೆ ಪತ್ರಿಕೆ : ಆಗಸ್ಟ್ 2004) ಲೇಖನ ಪ್ರಶಸ್ತಿಗಾಗಿ ಆಯ್ಕೆಯಾಗಿದೆ. ಮುಕ್ತ ವಿಭಾಗದಲ್ಲಿ ಶ್ರೀ ಮಲ್ಲಿಕಾರ್ಜುನ ಹೊಸಪಾಳ್ಯ ಅವರ ಲೇಖನ – 'ನೆಟ್ಟಿರಾಗಿ ಪದ್ಧತಿ : ಅಧಿಕ ಇಳುವರಿ ನೀಡುವ ವಿಧಾನ ' (ಪ್ರಜಾವಾಣಿ : ಜೂನ್ 9, 2004) ಪ್ರಶಸ್ತಿಗೆ ಆಯ್ಕೆಗೊಂಡಿದೆ.

ಪ್ರಶಸ್ತಿ ತಲಾ ಎರಡು ಸಾವಿರ ರೂಪಾಯಿ ನಗದು ಪುರಸ್ಕಾರ, ಪರಿಸರ ಶಿಲ್ಪ ಹಾಗೂ ಪ್ರಶಸ್ತಿ ಪತ್ರವನ್ನು ಒಳಗೊಂಡಿವೆ. ನೆಲ-ಜಲ ಸಂರಕ್ಷಣೆ ವಲಯದಲ್ಲಿ ಅರ್ಥಪೂರ್ಣ ಸಾಧನೆ ಮಾಡಿರುವ ಹಾವೇರಿ ಜಿಲ್ಲೆ ಕಾಕೋಳದ ಶ್ರೀ ಚನಬಸಪ್ಪ ಶಿವಪ್ಪ ಕೊಂಬಳಿ ಅವರಿಗೆ ಕೇಂದ್ರ ವಿಶೇಷ ಪ್ರಶಸ್ತಿ ಪ್ರಕಟಿಸಿದೆ. ಈ ಪ್ರಶಸ್ತಿ ನಾಲ್ಕು ಸಾವಿರ ರೂಪಾಯಿ ನಗದು ಪುರಸ್ಕಾರ ಹಾಗೂ ಪ್ರಶಸ್ತಿ ಪತ್ರವನ್ನು ಒಳಗೊಂಡಿದೆ. ಪ್ರಶಸ್ತಿ ಪ್ರದಾನ ಸಮಾರಂಭ ಡಿಸೆಂಬರ್ 26, 2004 ರಂದು ಸುಳ್ಯ ತಾಲೂಕು ಕುಕ್ಕುಜಡ್ಕದ ಶ್ರೀರಂಗದಲ್ಲಿ ಜರುಗಿರುತ್ತದೆ.

'ಸೃಷ್ಟಿ' ಸನ್ಮಾನ 2004

ದಿನಾಂಕ 05.12.2004ರಂದು ಅಹಮದಾಬಾದಿನಲ್ಲಿ ನಡೆದ ಸನ್ಮಾನ ಸಭೆಯಲ್ಲಿ ಕರ್ನಾಟಕದ ಈ ಕೆಳಗಿನವರನ್ನು ಸನ್ಮಾನಿಸಲಾಯಿತು.

1. ಶ್ರೀ ಆಮೈ ದೇವರಾವ್, (ತಳಿ ಸಂರಕ್ಷಣೆ), ಮಿತ್ತಬಾಗಿಲು, ದಕ್ಷಿಣ ಕನ್ನಡ ಜಿಲ್ಲೆ,
2. ಶ್ರೀ ವೆಂಕಟರಮಣ ದೈತೋಟ, (ನಾಟಿ ವೈದ್ಯ), ಪಾಣಾಜೆ, ದಕ್ಷಿಣ ಕನ್ನಡ ಜಿಲ್ಲೆ,
3. ಶ್ರೀಮತಿ ಸೀತಾಲಕ್ಷ್ಮಿ, (ಕಟ್ಟಡ ನಿರ್ಮಾಣದ ಗುತ್ತಿಗೆ), ಲೋಕನಾಥಪುರ, ಚಿಕ್ಕಮಗಳೂರು ಜಿಲ್ಲೆ,
4. ಶ್ರೀ ಚಾಂದ್ ಹುಸೇನ ಸಾಬ, (ಸ್ವಯಂ ಪರಿಶ್ರಮದಿಂದ ಬಾವಿ ತೋಡಿರುವುದು) ದೇವರ ಮನೆ, ಚಿಕ್ಕಮಗಳೂರು ಜಿಲ್ಲೆ,
5. ಶ್ರೀ ಕಾಡಪ್ಪ ಗೌಡ, (ಕೀಟ ತಜ್ಞ), ಬೇಗಾನೆ, ಚಿಕ್ಕಮಗಳೂರು ಜಿಲ್ಲೆ

ಇವರುಗಳನ್ನು ಹಿತ್ತಲಗಿಡ ಬಳಗ ಅಭಿನಂದಿಸುತ್ತದೆ.

– *ಸಂಪಾದಕರು*

ಡೆಕ್ಕನ್ ಡೆವಲಪ್‌ಮೆಂಟ್ ಸೊಸೈಟಿಯ ಸುಸ್ಥಿರ ಆಹಾರ ವ್ಯವಸ್ಥೆ, ತಳಿ ವೈವಿಧ್ಯ ಮತ್ತು ಆಹಾರ ಭದ್ರತೆ - ಸಾಧನೆ ಹಂಚಿಕೊಳ್ಳುವ ಕಾರ್ಯಾಗಾರ

ಈ ಮೇಲಿನ ಕಾರ್ಯಾಗಾರ, ಕಳೆದ ಸೆಪ್ಟೆಂಬರ್ 20 ಮತ್ತು 21 ರಂದು, ಡೆಕನ್ ಡೆವೆಲಪ್‌ಮೆಂಟ್ ಸೊಸೈಟಿಯ ಕೇಂದ್ರ ಸ್ಥಳವಾದ ಆಂಧ್ರ ರಾಜ್ಯದ ಮೇಡಕ್ ಜಿಲ್ಲೆಯ ಪಸ್ತಾಪುರ ಗ್ರಾಮದಲ್ಲಿ ಜರುಗಿತ್ತು. ಡೆಕ್ಕನ್ ಡೆವೆಲಪ್‌ಮೆಂಟ್ ಸಂಸ್ಥೆ, ಲಂಡನ್‌ನ "ಅಂತರರಾಷ್ಟ್ರೀಯ ಪರಿಸರ ಮತ್ತು ಅಭಿವೃದ್ಧಿ ಸಂಸ್ಥೆ"ಯ ಸಹಯೋಗದಿಂದ ಸಹಸ್ರಾರು ದಲಿತ, ಬಡ ಮಹಿಳೆಯರನ್ನು ಸಂಘಟಿಸಿ, ಆ ಮೂಲಕ ತಳಿ ಸಂರಕ್ಷಣೆ, ಪರ್ಯಾಯ ಸಾರ್ವಜನಿಕ ವಿತರಣಾ ವ್ಯವಸ್ಥೆ, ಸುಸ್ಥಿರ ಆಹಾರ ಪದ್ಧತಿ ಇತ್ಯಾದಿ ಪ್ರಯೋಗಗಳನ್ನು ನಡೆಸುತ್ತಿದ್ದು ಈ ನಿಟ್ಟಿನಲ್ಲಿ ಅದ್ಭುತ ಯಶಸ್ಸನ್ನು ಸಾಧಿಸಿರುತ್ತದೆ. ಈ ನಿಟ್ಟಿನಲ್ಲಿ 'ವಿಸ್ತರಣೆ', ಸಂವಹನ ಮತ್ತು ಪ್ರಚಾರಕ್ಕಾಗಿ ಈ ತಳಮಟ್ಟದ ಮಹಿಳೆಯರಿಗೆ ತರಬೇತಿ ನೀಡಲು ಒಂದು ಪರ್ಯಾಯ ಸಮುದಾಯ ಮಾಧ್ಯಮ ಸಂಸ್ಥೆ (Community Media Trust)ಯನ್ನು ನಿರ್ಮಿಸಿರುತ್ತದೆ. ನಿರಕ್ಷರಸ್ತ ಬಡ ದಲಿತ ಮಹಿಳೆಯರ ಈ ತಂಡ ಅತ್ಯಂತ ಸೂಕ್ಷ್ಮ ಎಲೆಕ್ಟ್ರಾನಿಕ್ಸ್ ಕ್ಯಾಮರಗಳನ್ನು ಕೈಗೆತ್ತಿಕೊಂಡು ಈಗಾಗಲೇ ನೂರಾರು ವೀಡಿಯೋ ಮತ್ತು ಚಲನಚಿತ್ರ ತಯಾರಿಸಿ, ಒಂದು ಅನನ್ಯ ರೀತಿಯ ಮಾಧ್ಯಮ ಕ್ರಾಂತಿಯನ್ನೆ ನಡೆಸಿರುವರು. ಗೆಳೆಯ ಸತೀಶ್ ನೇತೃತ್ವದ ಡೆಕ್ಕನ್ ಡೆವಲಪ್‌ಮೆಂಟ್ ಸೊಸೈಟಿಯ ಈ ಅದ್ಭುತ ಸಾಧನೆಯ ಅನುಭವವನ್ನು ಹಂಚಿಕೊಳ್ಳುವ ಉದ್ದೇಶ ಈ ಕಾರ್ಯಾಗಾರದ್ದಾಗಿತ್ತು.

ರಾಷ್ಟ್ರೀಯ ಅನುಶೋಧನಾ ಪ್ರತಿಷ್ಠಾನದ ಮೂರನೇ ಸುತ್ತಿನ ಸ್ಪರ್ಧೆಯಲ್ಲಿ ಕರ್ನಾಟಕದಿಂದ ಈ ಕೆಳಗಿನವರು ಪ್ರಶಸ್ತಿಗಾಗಿ ಆಯ್ಕೆಯಾಗಿರುವುದು ಸಂತೋಷದ ವಿಷಯ.

ಹೆಸರು	ಅನುಶೋಧನೆ	ಬಹುಮಾನ
1. ಸಂಕೇತ್ ವಿ. ಚಿತಗೋಪ್ಕರ್ & ಪ್ರಶಾಂತ್ ವಿ. ಹರ್ಷಂಗಿ, ಗುಲ್ಬರ್ಗ ಜಿಲ್ಲೆ	ಅಂಧರಿಗಾಗಿ ಸುಧಾರಿತ ಕೋಲು	ದ್ವಿತೀಯ
2. ರಾಘವ ಗೌಡ, ಸುಳ್ಯ, ದಕ್ಷಿಣ ಕನ್ನಡ	ಹಾಲು ಕರೆಯುವ ಯಂತ್ರ	ರಾಜ್ಯ ಪ್ರಶಸ್ತಿ
3. ಜ್ಯೋತಿ ರವಿಶಂಕರ್, ದಕ್ಷಿಣ ಕನ್ನಡ	ಬಹುಪಯೋಗಿ ಒಲೆ	ಸಮಾಧಾನಕರ
4. ಶಂಕರ್ ಪಟಾಲಿ, ಪುತ್ತೂರು	ರಬ್ಬರ್‌ಶೀಟ್ ತಯಾರಿಕೆಯಲ್ಲಿ ಮಜ್ಜಿಗೆ	ಸಮಾಧಾನಕರ
5. ಎಸ್. ಎಂ. ಮಂಗಳಿ, ಗದಗ ಜಿಲ್ಲೆ	ರೇಷ್ಮೆ ಸಾಕಣೆಯಲ್ಲಿ ಚಂದ್ರಿಕೆ	ಸಮಾಧಾನಕರ
6. ಮೊಹಮದ್ ವಕೀಲ್ ಅಹಮದ್, ಚೆನ್ನಪಟ್ಟಣ ತಾ	ಊಜಿ ನೊಣ ನಿಯಂತ್ರಣ	ಸಮಾಧಾನಕರ
7. ಕುಂಜಿರ ಮೂಲ್ಯ, ದಕ್ಷಿಣ ಕನ್ನಡ	ಜೀವವೈವಿಧ್ಯ ಜ್ಞಾನ	ಪ್ರೋತ್ಸಾಹ

ಇದೇ ದಿನಾಂಕ 5.1.2005ರಂದು ಭಾರತೀಯ ಪ್ರಬಂಧನ ಸಂಸ್ಥೆ ಅಹಮದಾಬಾದ್‌ನಲ್ಲಿ ರಾಷ್ಟ್ರಪತಿ ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ಈ ಬಹುಮಾನ ವಿಜೇತರನ್ನು ಸನ್ಮಾನಿಸಲಿದ್ದಾರೆ. ಇವರುಗಳನ್ನು ಹಿತ್ತಲಗಿಡ ಬಳಗ ಅಭಿನಂದಿಸುತ್ತದೆ.

Printed by Sri S. Sridhar, Published by Smt. K. Meenakshi (Owner). Printed at "Navabharath Enterprises", No.10, Sirur Park 'B' Street, Sheshadripuram, Bangalore-20 and Published at No.399, 14-B Cross, New Town Yelahanka, Bangalore-560 064. Edited by Dr. T.N. Prakash Kammaradi.

ತಳ ಮಟ್ಟದ ಜನರ ಶೋಧನೆಗಳ ಹುಡುಕಾಟದ ಸ್ಪರ್ಧೆ

ರಾಷ್ಟ್ರೀಯ ಅನುಶೋಧನೆ ಪ್ರತಿಷ್ಠಾನ (National Innovation Foundation)

ರಾಷ್ಟ್ರೀಯ ಮಟ್ಟದ ನಾಲ್ಕನೇ ಮತ್ತು ಐದನೇ ಸ್ಪರ್ಧೆ

ರಾಷ್ಟ್ರೀಯ ಅನುಶೋಧನೆ ಪ್ರತಿಷ್ಠಾನ

ಭಾರತ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ವಿಭಾಗ (Department of Science and Technology) ಈ ಪ್ರತಿಷ್ಠಾನವನ್ನು ಸ್ಥಾಪಿಸಿದ್ದು, ಇದರ ಮೂಲ ಉದ್ದೇಶ ತಳಮಟ್ಟದ ಸಂಶೋಧಕರನ್ನು ಗುರುತಿಸಿ, ಗೌರವಿಸಿ, ಪುರಸ್ಕರಿಸುವುದಾಗಿರುತ್ತದೆ. ಈ ಮೂಲಕ ಸುಸ್ಥಿರ ತಂತ್ರಜ್ಞಾನಕ್ಕೆ ಸಂಬಂಧಿಸಿದಂತೆ ಭಾರತವನ್ನು ಸ್ವಾವಲಂಬಿ ಹಾಗೂ ತೃತೀಯ ಜಗತ್ತಿಗೇ ನೇತೃತ್ವ ವಹಿಸಲು ಸಿದ್ಧವಾಗಿರುವಂತಹ ರಾಷ್ಟ್ರವನ್ನಾಗಿ ರೂಪಿಸುವುದಾಗಿದೆ. ಪ್ರತಿಷ್ಠಾನವು ತಳಮಟ್ಟದ ಸಂಶೋಧಕರಿಗೆ ಮೂರು ರೀತಿಯಲ್ಲಿ ನೆರವಾಗಲಿದೆ. ಅ) ಆಧುನಿಕ ವಿಜ್ಞಾನ ಹಾಗೂ ತಂತ್ರಜ್ಞಾನದ ಪ್ರವೀಣರೊಂದಿಗೆ ಸಂಪರ್ಕ ಕಲ್ಪಿಸುವುದು, ಆ) ಶೋಧನೆಗಳನ್ನು ಉದ್ದಿಮೆಯನ್ನಾಗಿ ಪರಿವರ್ತಿಸುವುದು, ಇ) ಬೌದ್ಧಿಕ ಸನದಿನ ಹಕ್ಕು (Intellectual Property Rights) ಶೋಧಕರಿಗಾಗಿ ದೊರೆಯುವಂತೆ ಮಾಡಿ, ಅವರಿಗೆ ಬೇಕಾದ ಮೂಲಧನ ಒದಗಿಸುವಲ್ಲಿ ನೆರವಾಗುವುದು. ಪ್ರತಿಷ್ಠಾನವು ರಾಷ್ಟ್ರಮಟ್ಟದಲ್ಲಿ, ತಳಮಟ್ಟದ ಸಂಶೋಧಕರು ಹಾಗೂ ಇತರರ ಸಂಶೋಧನೆಗಳ ದಾಖಲಾತಿ ಸಿದ್ಧಪಡಿಸುವ ಉದ್ದೇಶ ಹೊಂದಿದ್ದು; ನಮ್ಮ ಸಮಾಜದಲ್ಲಿನ ಮೂಲೆ ಮೂಲೆಯ ಶೋಧಕರಿಗೆ ನೆರವಾಗುವಂತಹ, ಕಾಯ್ದೆ ಕಾನೂನಿನ ರೂಪುರೇಷೆ ಸಿದ್ಧಪಡಿಸಲಿದೆ.

ಪ್ರಶಸ್ತಿ

ತಳಮಟ್ಟದ ಜನರ ಶೋಧನೆಗಳ ಹುಡುಕಾಟದ ರಾಷ್ಟ್ರೀಯ ಸ್ಪರ್ಧೆಯಲ್ಲಿ ಅತ್ಯುತ್ತಮ ಅನುಶೋಧನೆಗೆ ರೂಪಾಯಿ 1,00,000 ಮೊದಲ ಬಹುಮಾನ, ರೂಪಾಯಿ 50,000 ಹಾಗೂ ರೂಪಾಯಿ 25,000, 2ನೇ ಮತ್ತು 3ನೇ ಬಹುಮಾನ ಕೊಡಲಾಗುವುದು. ಜೊತೆಗೆ ರೂಪಾಯಿ 7,500 ಪ್ರೋತ್ಸಾಹಕ ಬಹುಮಾನಗಳನ್ನು ನೀಡಲಾಗುವುದು. ಶೋಧನೆಗಳ ಜೊತೆಯಲ್ಲಿ, ಇಂತಹ ತಳಮಟ್ಟದ ಶೋಧಕರನ್ನು ಪರಿಚಯಿಸಿದ ಸ್ಕೌಟ್ಸ್‌ಗಳು ಹಾಗು ಪರಿಶೋಧಕರಿಗೆ ಪ್ರತಿಯೊಬ್ಬರಿಗೂ 7,500 ಸಾಂತ್ವನ ಪುರಸ್ಕಾರಗಳಿವೆ. ಹಾಗೇ ರಾಜ್ಯ ಮಟ್ಟದಲ್ಲೂ ಪ್ರೋತ್ಸಾಹ ಬಹುಮಾನಗಳನ್ನು ನೀಡಲಾಗುವುದು. ಬಹುಮಾನ ವಿಜೇತ ಶೋಧನೆಗಳು ರಾಷ್ಟ್ರೀಯ ದಾಖಲಾತಿ ಪುಸ್ತಕದಲ್ಲಿ ಸ್ಥಾನ ಪಡೆಯಲಿವೆ. ತಳಮಟ್ಟದ ಶೋಧನೆ ಹಾಗೂ ಶೋಧಕರಿಗೆ ಸಾಕಷ್ಟು ಪ್ರಚಾರ ಹಾಗೂ ಪ್ರಾಮುಖ್ಯತೆಯನ್ನು ಕೂಡಾ ನೀಡಲಾಗುವುದು.

ಸ್ಪರ್ಧೆ

ಯಾವುದೇ ರೀತಿಯ ಸಾಂಸ್ಥಿಕ ಮೂಲದ ನೆರವು, ವ್ಯವಸ್ಥಿತ ವಿಜ್ಞಾನ ಮತ್ತು ತಂತ್ರಜ್ಞಾನ ಸಂಸ್ಥೆಗಳ ಮಾರ್ಗದರ್ಶನ ಇಲ್ಲದೇ ರೈತರು, ಬುಡಕಟ್ಟು ಜನಾಂಗಗಳು, ಹೈನುಗಾರರು, ಕರಕುಶಲಕರ್ಮಿಗಳು, ಮಹಿಳೆಯರು, ಬೆಸ್ತರು ಇಂತಹವರೇ ಮೊದಲಾದ ಸ್ಥಳೀಯ ಮಟ್ಟದಲ್ಲಿ ವ್ಯಕ್ತಿ, ಗುಂಪು ಮತ್ತು ಸಮುದಾಯಗಳು ತಮ್ಮ ಕಸುಬು, ಕೃಷಿ, ಪರಿಸರ, ಜೀವ ವೈವಿಧ್ಯತೆಗಳನ್ನು ಕಾಪಾಡುವಲ್ಲಿ ಕಂಡು ಕೊಂಡಿರುವ ವಿಧಿ ವಿಧಾನಗಳು, ಶೋಧಿಸಿರುವ ಉಪಕರಣಗಳು, ಜಾನುವಾರು ಚಿಕಿತ್ಸೆ, ಬೆಳೆ ಸಂರಕ್ಷಣಾ ಪದ್ಧತಿಗಳು, ಕಡಿಮೆ ವೆಚ್ಚದ ಯಂತ್ರೋಪಕರಣಗಳು, ಇನ್ನಾವುದೇ ರೀತಿಯ ಸಾಮಾನ್ಯ ಜನರ ಅನುಕೂಲಕ್ಕಾಗಿ ಮೂಡಿ ಬಂದಿರುವ ಅನುಶೋಧನೆಗಳನ್ನು ಸ್ಪರ್ಧೆಗೆ ಕಳುಹಿಸಬಹುದು. ಆದರೆ ಸಾಮಾಜಿಕವಾಗಿ ಒಪ್ಪಿತವಲ್ಲದ ಹಾಗೇ ಪರಿಸರದ ಮೇಲೆ ಹಾನಿಯಿರುವ ಅನುಶೋಧನೆಗಳನ್ನು ಈ ಸ್ಪರ್ಧೆಯಲ್ಲಿ ಸ್ವೀಕರಿಸಲಾಗುವುದಿಲ್ಲ.

ಭಾಗವಹಿಸುವ ವಿಧಾನ

ಅನುಶೋಧನೆಗಳಿಗೆ ಸಂಬಂಧಿಸಿದಂತೆ ವ್ಯಕ್ತಿ ಮತ್ತು ಗುಂಪುಗಳು ಎಷ್ಟು ಬೇಕಾದರೂ ಮಾಹಿತಿಗಳನ್ನು ಕಳುಹಿಸಬಹುದು. ಪ್ರವೇಶ ಪತ್ರವು ಶೋಧನೆಯ ವಿವರ, ಕಾರ್ಯಭೂತ ವ್ಯಕ್ತಿ ಅಥವಾ ಸಮುದಾಯದ ಸಂಪೂರ್ಣ ಪರಿಚಯ, ಶೋಧನೆ ಮೃತ್ತು ಕಾರ್ಯಭೂತ ವ್ಯಕ್ತಿಯ ಹಿನ್ನೆಲೆ ಇವೆಲ್ಲವುಗಳ ಕುರಿತಂತೆ ಸಾಧ್ಯವಾದಷ್ಟು ಮಟ್ಟಿನ ವಿವರವನ್ನು ಹೊಂದಿರಬೇಕು. ಛಾಯಾ ಚಿತ್ರಗಳು ಮತ್ತು ಮಾದರಿಗಳನ್ನೂ ಸಹ ಕಳಿಸಬಹುದು. ಈ ಶೋಧನೆಯನ್ನು ಬಳಕೆ ಮಾಡುತ್ತಿದ್ದಲ್ಲಿ ಸುಮಾರು ಎಷ್ಟು ಮಂದಿ ಮತ್ತು ಎಷ್ಟು ಕಾಲದಿಂದ ಬಳಕೆ ಮಾಡಲಾಗುತ್ತಿದೆ ಎಂದು ವಿವರ ಕೂಡಾ ಅಗತ್ಯ. ಶೋಧಕ ಮತ್ತು ಶೋಧನೆಗಳ ಚಿತ್ರ , ಫೋಟೋಗಳನ್ನು ಸಾಧ್ಯವಾದಲ್ಲಿ ವಿಡಿಯೋವನ್ನು ಪ್ರವೇಶ ಪತ್ರದೊಂದಿಗೆ ಕಳಿಸಿದರೆ ಉತ್ತಮ. ನಾಲ್ಕನೆಯ ಸ್ಪರ್ಧೆಗೆ ಡಿಸೆಂಬರ್ 2004 ಮತ್ತು ಐದನೇ ಸ್ಪರ್ಧೆಗೆ ಡಿಸೆಂಬರ್ 2005ರವರೆಗೆ ಅವಕಾಶವಿದೆ.

ಪೂರ್ವ ಸೂಚಿತ ಸಮ್ಮತಿ

ಈ ಸ್ಪರ್ಧೆಗೆ ಸ್ವೀಕೃತವಾದ ಅನುಶೋಧನೆಗಳನ್ನು ಮುಂದೆ ಬಳಸಿಕೊಳ್ಳುವ ವಿಧಾನವನ್ನು ಬೇರೆಯವರೊಡನೆ ಹಂಚಿಕೊಳ್ಳುವ ಮತ್ತು ವಾಣಿಜ್ಯಗೊಳಿಸುವ ಬಗ್ಗೆ ಹಾಗೇ ಈ ಮೂಲಕ ಬರಬಹುದಾಗಿರುವ ಲಾಭಾಂಶದ ಹಂಚಿಕೆ, ಈ ಎಲ್ಲದರ ಬಗ್ಗೆ ಇಂತಹಾ ಅನುಶೋಧನೆಗಳ ನೈಜ ವಾರಸುದಾರರಿಂದ ಒಂದು "ಪೂರ್ವ ಸೂಚಿತ ಸಮ್ಮತಿ" (Prior Informed Consent) ಪಡೆದ ನಂತರವೇ ಮುಂದುವರೆಯಲಾಗುವುದು.

ಪತ್ರಿಕೆ ನೋಂದಣಿ ಸಂಖ್ಯೆ 66842/96

ತೆರೆದ ಅಂಚೆ

ಗೆ, ...

ವಿಳಾಸ
ಡಾ. ಟಿ. ಎನ್. ಪ್ರಕಾಶ್ ಕಮ್ಮರಡಿ
ಸಹ ಪ್ರಾಧ್ಯಾಪಕ ಮತ್ತು
ಗೌರವ ಸಂಪಾದಕ 'ಹಿತ್ತಲಗಿಡ'
ಕೃಷಿ ಅರ್ಥಶಾಸ್ತ್ರ ವಿಭಾಗ
ಕೃಷಿ ವಿಶ್ವವಿದ್ಯಾನಿಲಯ, ಜಿ.ಕೆ.ವಿ.ಕೆ.
ಬೆಂಗಳೂರು - 560 065
Ph: 080-23620025 (O)
email: hittalu@bgl.vsnl.net.in